24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 114 | ನವದೆಹಲಿ | ಬೆಲೆ ₹10 | ಅಕ್ಟೋಬರ್, 20, 2026, ಮಂಗಳವಾರ

ಶ್ರೀ ಡಿ. ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಡಾ. ಜಿ. ಪರಮೇಶ್ವರ
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್
ಮಾನ್ಯ ಸಂಸದರು (ಲೋಕಸಭೆ)
ಹಾಗೂ ಮೈಸೂರು ರಾಜ ಮನೆತನದ ಪ್ರತಿನಿಧಿ

ವಿಶೇಷ ಅತಿಥಿಗಳು

ಶ್ರೀ ವಿ. ಡಿ. ಸತೀಶನ್
ಸನ್ಮಾನ್ಯ ಮುಖ್ಯಮಂತ್ರಿಗಳು
ಕೇರಳಂ ಸರ್ಕಾರ

ಶ್ರೀ ಎ. ರೇವಂತ್ ರೆಡ್ಡಿ
ಸನ್ಮಾನ್ಯ ಮುಖ್ಯಮಂತ್ರಿಗಳು
ತೆಲಂಗಾಣ ಸರ್ಕಾರ

ನಾಡಿನ ಸಮಸ್ತ ಜನತೆಗೆ

ಆಯುಧ ಪೂಜೆ ಹಾಗೂ ವಿಜಯದಶಮಿಯ ಶುಭಾಶಯಗಳು

ಕರ್ನಾಟಕದ ಸಂಸ್ಕೃತಿ, ಪರಂಪರೆಯ ಮೆರವಣಿಗೆ

ದಿನಾಂಕ:
ಅಕ್ಟೋಬರ್ 21
ಬುಧವಾರ

ಸಮಯ:
ಸಂಜೆ 4:00
ಗಂಟೆಯಿಂದ

ಐತಿಹಾಸಿಕ ಜಂಬೂಸವಾರಿ

ಮೈಸೂರಿನಲ್ಲಿ ನಾಡದೇವಿ ಶ್ರೀ ಚಾಮುಂಡೇಶ್ವರಿಯ ಅಂಬಾರಿ ಮೆರವಣಿಗೆ ನೋಡಬನ್ನಿ, ಕರ್ನಾಟಕದ ವೈಭವ ಕಣ್ತುಂಬಿಕೊಳ್ಳಿ

ನಿತ್ಯ ಪಂಚಾಂಗ 20.10.2026 ಮಂಗಳವಾರ

ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ

ಆಶ್ವಯುಜ ಶುದ್ಧ, ನವಮಿ, ಶ್ರವಣ ನಕ್ಷತ್ರ, ಮಹಾನವಮಿ, ಆಯುಧಪೂಜೆ, ವಿಜಯದಶಮಿ, ವೆಂಕಟೇಶ ಜಯಂತಿ, ಹರಳಯ್ಯ -ಮಧುವಯ್ಯ ಮಹಾನವಮಿ

ದಿನ	ರಾಹುಕಾಲ	ಯಮಗಂಡ	ಗುಳಕಕಾಲ
ಭಾನು	ಸ. 5.04– 6.33	12.00– 1.30	3.00– 4.00
ಸೋಮ	ಬೆ. 7.20– 9.04	10.30–12.00	1.30– 3.00
ಮಂಗಳ	ಮು. 3.25– 4.59	9.00–10.30	12.00– 1.30
ಬುಧ	ಮು.12.16– 1.50	7.30– 9.00	10.30– 12.00
ಗುರು	ಮು. 1.50– 3.29	6.00– 7.30	9.00– 10.30
ಶುಕ್ರ	ಬೆ.10.42–12.16	3.00– 4.30	7.30– 9.00
ಶನಿ	ಬೆ. 9.07–10.41	1.30– 3.00	6.00– 7.30

ಕರ್ನಾಟಕ ಜಾನಪದ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರಕಟ

30 ಕಲಾವಿದರು, ಇಬ್ಬರು ವಿದ್ವಾಂಸರಿಗೆ ವಾರ್ಷಿಕ ಗೌರವ, ತಜ್ಞ ಪ್ರಶಸ್ತಿ

ಬೆಂಗಳೂರು, ಅ.19: ಕರ್ನಾಟಕ ಜಾನಪದ ಅಕಾಡೆಮಿಯ 2026ನೇ ಸಾಲಿನ ರಾಜ್ಯಮಟ್ಟದ ವಾರ್ಷಿಕ ಗೌರವ ಪ್ರಶಸ್ತಿ ಹಾಗೂ ತಜ್ಞ ಪ್ರಶಸ್ತಿಗಳ ಪಟ್ಟಿಯನ್ನು ಅಕಾಡೆಮಿ ಅಧ್ಯಕ್ಷ ಡಾ. ಗೊಲ್ಲಹಳ್ಳಿ ಶಿವಪ್ರಸಾದ್ ಪ್ರಕಟ ಮಾಡಿದರು.

ಸುದ್ದಿಗೋಷ್ಠಿಯಲ್ಲಿ 2026ನೇ ಸಾಲಿಗೆ 30 ಹಿರಿಯ ಕಲಾವಿದರು ಹಾಗೂ ಇಬ್ಬರು ವಿದ್ವಾಂಸರನ್ನು ವಾರ್ಷಿಕ ಗೌರವ ಹಾಗೂ ತಜ್ಞ ಪ್ರಶಸ್ತಿಗಳಿಗೆ ಆಯ್ಕೆಯಾದ ಗಣ್ಯರ ಪಟ್ಟಿಯನ್ನು ಬಿಡುಗಡೆಗೊಳಿಸಿದರು.

ಈ ಕುರಿತು ಮಾಹಿತಿ ನೀಡಿದ ಅಧ್ಯಕ್ಷರು, 1980ರಿಂದಲೂ ಕಾರ್ಯನಿರ್ವಹಿಸುತ್ತ ಬಂದಿರುವ ಕರ್ನಾಟಕ ಜಾನಪದ ಅಕಾಡೆಮಿಯು ಜಾನಪದ ಕಲೆ ಮತ್ತು ಸಂಸ್ಕೃತಿಯ ಉಳಿವಿಗೆ ಶ್ರಮಿಸುತ್ತಿರುವ ಕಲಾವಿದರನ್ನು ಗುರುತಿಸಿ ಸನ್ಮಾನಿಸುತ್ತಿದೆ. 1980ರಿಂದ 2025ರವರೆಗೆ 1,251 ಗೌರವ ಪ್ರಶಸ್ತಿಗಳನ್ನು (1,134 ಕಲಾವಿದರು ಮತ್ತು 117 ವಿದ್ವಾಂಸರು) ನೀಡಲಾಗಿದೆ.

ಅ.14ರಂದು ಬೆಂಗಳೂರಿನಲ್ಲಿ ನಡೆದ ಸರ್ವ ಸದಸ್ಯರ ಸಭೆಯ ತೀರ್ಮಾನದಂತೆ ಈ ಪ್ರಶಸ್ತಿಗಳಿಗೆ ಸಾಧಕರನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಅಕಾಡೆಮಿಯ ಸದಸ್ಯರಾದ ಡಾ. ಕೆಂಪಮ್ಮ, ಮಂಜೇಶ್ ಚೆನ್ನಾಪುರ ಹಾಗೂ ಕೆಂಕೆರೆ ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು.

ಪ್ರಶಸ್ತಿಯ ವಿವರ:

ವಾರ್ಷಿಕ ಗೌರವ ಪ್ರಶಸ್ತಿ: 2026–27ನೇ ಸಾಲಿನಲ್ಲಿ ರಾಜ್ಯದ 31 ಜಿಲ್ಲೆಗಳಿಂದ ಒಟ್ಟು 30 ಹಿರಿಯ ಜಾನಪದ ಕಲಾವಿದರಿಗೆ ಈ ಪ್ರಶಸ್ತಿ ಲಭಿಸಿದ್ದು, ಪ್ರಶಸ್ತಿಯು ರೂ. 25,000/– ನಗದು, ಸ್ಮರಣಿಕೆ ಒಳಗೊಂಡಿದೆ.

ತಜ್ಞ ಪ್ರಶಸ್ತಿ: ಇಬ್ಬರು ಹಿರಿಯ ಜಾನಪದ ವಿದ್ವಾಂಸರಿಗೆ ತಲಾ ರೂ. 50,000/– ನಗದು ಹಾಗೂ ಗೌರವ ಸಮರ್ಪಣೆಯೊಂದಿಗೆ ತಜ್ಞ ಪ್ರಶಸ್ತಿ ನೀಡಲಾಗುತ್ತದೆ.

ತಜ್ಞ ಪ್ರಶಸ್ತಿ ಪುರಸ್ಕೃತರು:
ಡಾ. ಎಂ. ಬೈರೇಗೌಡ (ಬೆಂಗಳೂರು ದಕ್ಷಿಣ) – ಡಾ. ಜೀ.ಶಂ.ಪ ಜಾನಪದ ತಜ್ಞ ಪ್ರಶಸ್ತಿ
ಡಾ. ವಿ. ಎಲ್. ಪಾಟೀಲ (ಧಾರವಾಡ) – ಡಾ. ಬಿ.ಎಸ್. ಗದ್ದಿಗಿಮಠ ಜಾನಪದ ತಜ್ಞ ಪ್ರಶಸ್ತಿ

ಪ್ರಶಸ್ತಿ ಪುರಸ್ಕೃತರ ಪಟ್ಟಿ:

ಬೆಂಗಳೂರು ನಗರ:
ಎಸ್.ಎಂ.ರಾಜಣ್ಣ (ಜಾನಪದ ಗಾಯನ)
ಬೆಂಗಳೂರು ಗ್ರಾಮಾಂತರ:
ಶಂಕರ್ ಭಾರತೀಪುರ (ಜಾನಪದ ಗಾಯನ)
ಬೆಂಗಳೂರು ದಕ್ಷಿಣ:
ಮಾಯಣ್ಣ (ಪೂಜಾ ಕುಣಿತ)
ಕೋಲಾರ:
ಎ.ಎಲ್. ವೆಂಕಟೇಶ್ (ಬುರ್ರಕಥೆ)
ಚಿಕ್ಕಬಳ್ಳಾಪುರ:
ಡಾ.ಸೋ.ಸು.ನಾಗೇಂದ್ರನಾಥ್ (ಜಾನಪದ ಗಾಯನ)
ತುಮಕೂರು:
ವೀರೇಶ್ ಕುಮಾರ್ ಸಿ.ವಿ. (ವೀರಗಾಸೆ)
ದಾವಣಗೆರೆ:
ಎಚ್.ಬಿ.ಬಸವರಾಜು (ಕೀಲು ಕುದುರೆ)
ಚಿತ್ರದುರ್ಗ:
ಕೋಲಾಟದ ನರಸಪ್ಪ (ಕೋಲಾಟ)
ಶಿವಮೊಗ್ಗ:
ಬಿ.ಟಿ.ಸುಮಿತ್ರಾ (ಮಹಿಳಾ ಡೊಳ್ಳು)
ಮೈಸೂರು:
ಮಹೇಶ್ ಕೆ.ಎನ್. (ವೀರಗಾಸೆ)
ಮಂಡ್ಯ:
ಟಿ. ತಿಮ್ಮೇಶ್ (ಜಾನಪದ ಗಾಯನ)
ಹಾಸನ:
ಎಸ್.ಎನ್.ನಿಂಗಪ್ಪ (ಕೋಲಾಟ, ಮತ್ತು ರಂಗ ಕುಣಿತ)
ಚಿಕ್ಕಮಗಳೂರು:
ರಾಮಪ್ಪ ಡಿ (ಜಾನಪದ ಗಾಯನ)
ಚಾಮರಾಜನಗರ:
ಸಿ.ಎಂ. ನರಸಿಂಹಮೂರ್ತಿ (ಜಾನಪದ ಗಾಯನ)
ದಕ್ಷಿಣ ಕನ್ನಡ:
ಸುಬ್ಬಣ್ಣ ಪಂಡಿತ್ (ದೈವನರ್ತನ)
ಉಡುಪಿ:
ಬೈಲೂರು ಗೋವಿಂದರಾಜಶೆಟ್ಟಿ (ಭಜನೆ)
ಕೊಡಗು:
ರಮೇಶ್ ಜೆ.ಬಿ. (ಜಾನಪದ ನೃತ್ಯ)
ಬೆಳಗಾವಿ:
ಹಣಮಂತ ಗೋವಿಂದಪ್ಪ ಹೂಗಾರ (ಸಂಬಾಳ ವಾದನ)
ಧಾರವಾಡ:
ಬಸಣ್ಣ ಶಿವಬಸಪ್ಪ ಮುಳಗುಂದ (ತಂಬೂರಿ ಪದ, ತತ್ವಪದ)
ಕಲಬುರ್ಗಿ:
ಸೂರ್ಯಕಾಂತ ಪೂಜಾರಿ (ಜಾನಪದ ಗಾಯನ)
ವಿಜಯಪುರ:
ಭೀಮಾಬಾಯಿ ಗೌಡತಿ ಭೀಮನಗೌಡ ಬಿರಾದಾರ (ಸಂಪ್ರದಾಯದ ಪದ)
ಬಾಗಲಕೋಟೆ:
ದಾನಯ್ಯ ಮಹಾಲಿಂಗಯ್ಯ ಮಠಪತಿ (ಕರಡಿ ಮೇಳ)
ಉತ್ತರ ಕನ್ನಡ:
ಪುರುಷೋತ್ತಮಗೌಡ(ಹಾಲಕ್ಕಿ ಸುಗ್ಗಿ ಕುಣಿತ)
ಹಾವೇರಿ:
ಕಲ್ಲಪ್ಪ ಜಿಜಪ್ಪ ಬಗರಿಕಾರ (ಚರ್ಮ ವಾದ್ಯ ತಯಾರಿಕೆ)
ಗದಗ:
ಗೌಡಪ್ಪ ವೆಂಕಪ್ಪ ಬೊಮ್ಮನವರ(ಜಾನಪದ ಸಂಗೀತ)
ಬೀದರ್:
ದೇವದಾಸ ಚಿಮಕೋಡ (ಜಾನಪದ ಗಾಯನ)
ರಾಯಚೂರು:
ಸ.ಹುಲಿಗೆಪ್ಪ (ಜಾನಪದ ಗಾಯನ)
ಕೊಪ್ಪಳ:
ಮುದಕವ್ವ ಗಂಜಾಳ (ಮಾದರ) (ಗೀಗೀ ಪದ)
ಬಳ್ಳಾರಿ:
ಎನ್.ಬಿ.ಹುಸೇನ್ ಬಾಷಾ (ತಾಷಾರಂ ಡೋಲಿ)
ಯಾದಗಿರಿ:
ಶರಣಪ್ಪ (ಡೊಳ್ಳಿನ ಪದ)

ಕೆಎಸ್ಆರ್‌ಟಿಸಿಯಿಂದ ಮೈಸೂರು ದೇವದರ್ಶಿನಿ ಒಂದು ದಿನದ ಪ್ರವಾಸ

ಮೈಸೂರು, ಅ.19: ಒಂದೇ ದಿನದಲ್ಲಿ 7 ಅದ್ಭುತ ಪ್ರವಾಸಿ ತಾಣಗಳು! ಅದೂ ಕೇವಲ 300 ರಿಂದ!

ಮೈಸೂರಿನಿಂದ ಕೆಎಸ್ಆರ್‌ಟಿಸಿ ಜೊತೆ ಒಂದು ದಿನದ ಭರ್ಜರಿ ಪ್ರವಾಸಕ್ಕೆ ರೆಡಿಯಾಗಿ!

KSRTC ದೇವ ದರ್ಶಿನಿ One Day Tour Package

ಈ ಪ್ರವಾಸದಲ್ಲಿ ಭೇಟಿ ನೀಡಬಹುದಾದ ಸ್ಥಳಗಳು: ನಂಜನಗೂಡು, ತಲಕಾಡು, ಗಗನಚುಕ್ಕಿ ಮುಡುಕುತೊರೆ , ಸೋಮನಾಥಪುರ ಶ್ರೀರಂಗಪಟ್ಟಣ ಮತ್ತು ಕೆಆರ್‌ಎಸ್

ಪ್ರಯಾಣ ಆರಂಭ: ಬೆಳಗ್ಗೆ 6:30 ಹೊರಡುವ ಸ್ಥಳ: ಮೈಸೂರು ಸೆಂಟ್ರಲ್/ಸಬ್ ಅರ್ಬನ್ ಬಸ್ ಸ್ಟ್ಯಾಂಡ್

ಟಿಕೆಟ್ ದರ: ವಯಸ್ಕರು 300 ರೂ. – ಮಕ್ಕಳು 200 ರೂ.

ಟಿಕೆಟ್ ಲಭ್ಯತೆ, ಪ್ರಯಾಣದ ದಿನಾಂಕ, ಪ್ಯಾಕೇಜ್‌ನಲ್ಲಿ ಒಳಗೊಂಡಿರುವ ಸ್ಥಳಗಳು ಮತ್ತು ಬುಕ್ಕಿಂಗ್ ವಿವರಗಳಿಗಾಗಿ ಹತ್ತಿರದ KSRTC ಬುಕಿಂಗ್ ಕೌಂಟರ್‌ನಲ್ಲಿ ವಿಚಾರಿಸಿ. ಪ್ರಯಾಣಕ್ಕೆ ಮುನ್ನ ದರ ಮತ್ತು ವೇಳಾಪಟ್ಟಿಯನ್ನು ಖಚಿತಪಡಿಸಿಕೊಳ್ಳಿ. ಕಡಿಮೆ ಬಜೆಟ್‌ನಲ್ಲಿ ಕುಟುಂಬ ಮತ್ತು ಸ್ನೇಹಿತರ ಜೊತೆ ಒಂದು ದಿನದ ಸುಂದರ ಪ್ರವಾಸಕ್ಕೆ ಇದು ಒಳ್ಳೆಯ ಆಯ್ಕೆ!

ಮೇವು, ಕುಡಿಯುವ ನೀರಿಗೆ ತೀವ್ರ ಅಭಾವ ಸಾಧ್ಯತೆ: ಡಾ. ಜಿ.ಪರಮೇಶ್ವರ್ ಆತಂಕ

ಬರ ಪರಿಸ್ಥಿತಿಯಿಂದಾಗಿ ಶೇ.82ರಷ್ಟು ಆಹಾರ ಉತ್ಪಾದನೆ ಮೇಲೆ ಪರಿಣಾಮ

ಬೆಂಗಳೂರು, ಅ.19: ರಾಜ್ಯದಲ್ಲಿ ಬರ ಪರಿಸ್ಥಿತಿ ಭೀಕರವಾಗಿದ್ದು ಮುಂದಿನ ದಿನಗಳಲ್ಲಿ ಜನರಿಗೆ ಆಹಾರ, ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಲಿದೆ ಎಂದು ಡಿಸಿಎಂ ಡಾ.ಜಿ.ಪರಮೇಶ್ವರ್ ಆತಂಕ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ಬರ ಪರಿಸ್ಥಿತಿಯಿಂದಾಗಿ ರಾಜ್ಯದಲ್ಲಿ ಶೇ.82ರಷ್ಟು ಆಹಾರ ಉತ್ಪಾದನೆ ತಗ್ಗಲಿದೆ. ಇದರಿಂದಾಗಿ ಆಹಾರದ ಸಮಸ್ಯೆ ಮುಂದಿನ ದಿನಗಳಲ್ಲಿ ತೀವ್ರವಾಗಲಿದೆ ಎಂದು ಹೇಳಿದರು.

ರಾಜ್ಯ ಸರ್ಕಾರ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಹಣ ಬಿಡುಗಡೆ ಮಾಡಿದೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿಗಳು ಪರಿಸ್ಥಿತಿಯನ್ನು ನಿಭಾಯಿಸುತ್ತಿದ್ದಾರೆ. ಹಲವು ತಾಲ್ಲೂಕುಗಳನ್ನು ನಾವು ಬರ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿದ್ದೇವೆ. ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಅದರೆ ಬಹಳಷ್ಟು ಕಡೆ ನೀರಿನ ಮೂಲವೇ ಒಣಗಿದೆ. ಎಷ್ಟೇ ಹಣ ಖರ್ಚು ಮಾಡಿದರೂ ನೀರು ದೊರೆಯದಿದ್ದರೆ ಏನು ಮಾಡುವುದು ಎಂದು ಆತಂಕ ವ್ಯಕ್ತಪಡಿಸಿದರು.

ಬರ ಪರಿಸ್ಥಿತಿಯಿಂದಾಗಿರುವ ನಷ್ಟದ ಅಂದಾಜು ತಯಾರಿಸಿದ್ದೇವೆ. ಬರದ ಮೂರನೇ ಪಟ್ಟಿಯನ್ನು ಶೀಘ್ರವೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಈಗಾಗಲೇ ರೈತರಿಗೆ ಪ್ರಾಥಮಿಕ ನಷ್ಟ ಪರಿಹಾರವಾಗಿ 2,500 ರೂ.ಗಳನ್ನು ರೈತರಿಗೆ ಹಂಚಿ 1,250 ಕೋಟಿಗಳಷ್ಟು ಹಣ ಖರ್ಚಾಗಿದೆ. ಕೇಂದ್ರದಿಂದ ಹಣ ಬಿಡುಗಡೆಯಾದರೆ, ಅದನ್ನು ಸಂಕಷ್ಟದಲ್ಲಿರುವವರಿಗೆ ನೀಡಲು ಸಾಧ್ಯವಾಗುತ್ತದೆ.

ಕುಮಾರಸ್ವಾಮಿ ರಾಜೀನಾಮೆ ಕೊಡಲಿ:

ಸ್ಟಿಂಗ್ ಆಪರೇಷನ್ ಕುರಿತಂತೆ ಚರ್ಚೆಗಳು ಅಸಹ್ಯ ಹುಟ್ಟಿಸುತ್ತಿವೆ. ಇದು ರಾಜಕೀಯದಲ್ಲಿ ಒಳ್ಳೆಯ ಬೆಳವಣಿಗೆಯಲ್ಲ. ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದವರ ವ್ಯಕ್ತಿತ್ವ ಹರಣವಾಗುತ್ತಿದೆ ಎಂದು ಡಾ. ಜಿ. ಪರಮೇಶ್ವರ್ ಅಸಮಾಧಾನ ವ್ಯಕ್ತಪಡಿಸಿದರು.

ಈ ಬಗ್ಗೆ ಹೆಚ್ಚು ಮಾತನಾಡಲ್ಲ. ಸ್ಟಿಂಗ್ ಆಪರೇಷನ್ ಹಿನ್ನೆಲೆಯಲ್ಲಿ ಮಧ್ಯಂತರ ಚುನಾವಣೆ ಎದುರಾಗಲಿದೆ ಆಥವಾ ದಲಿತ ಮುಖಂಡರಿಗೆ ಮುಖ್ಯಮಂತ್ರಿ ಸ್ಥಾನ ನೀಡಲಾಗುತ್ತದೆ ಎಂಬೆಲ್ಲಾ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲು ನಿರಾಕರಿಸಿದರು. 2028ಕ್ಕೆ ಎನ್‌ಡಿಎ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದಾಗಿ ಹೇಳುತ್ತಿರುವುದನ್ನು ಗಮನಿಸಿದ್ದೇನೆ. ಸಮಯ ಬಂದಾಗ ಅದರ ಬಗ್ಗೆ ಮಾತನಾಡೋಣ, ಕುಮಾರಸ್ವಾಮಿಯವರಿಗೆ ರಾಜ್ಯ ರಾಜಕಾರಣಕ್ಕೆ ಬರಬೇಕು ಎಂಬ ಇರಾದೆ ಇದ್ದರೆ, ಅವರು ಕೂಡಲೇ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬರಲಿ, ಯಾರು ಬೇಡ ಎಂದಿದ್ದಾರೆ ಎಂದು ಹೇಳಿದರು.

ಸಿದ್ದರಾಮಯ್ಯಗೆ ಗೌರವ ಡಾಕ್ಟರೇಟ್ ಪ್ರದಾನ

ಕೋಲಾರ, ಅ.19: ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯ ಹಾಗೂ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಘೋಷಣೆ ಮಾಡಿದ್ದ ಡಾಕ್ಟರೇಟ್ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರಾಕರಿಸಿದ್ದರು. ಆದರೆ, ಇದೀಗ ಅನಿವಾರ್ಯವಾಗಿ ಎಲ್ಲರ ಒತ್ತಾಯದ ಮೇರೆಗೆ ಸೋಮವಾರ ನಡೆದ ಆರ್.ಎಲ್. ಜಾಲಪ್ಪ ಆಸ್ಪತ್ರೆ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯನವರು ದೇವರಾಜ ಅರಸು ಮೆಡಿಕಲ್ ಕಾಲೇಜಿನಿಂದ ನೀಡಿದ ಗೌರವ ಡಾಕ್ಟರೇಟ್ ಅನ್ನು ಸ್ವೀಕರಿಸಿದ್ದಾರೆ.

ಒಂದು ವರ್ಷದ ಹಿಂದೆಯೇ ಕಾಲೇಜು ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಘೋಷಿಸಲಾಗಿತ್ತಾದರೂ ಸಿದ್ದರಾಮಯ್ಯ ನಿರಾಕರಿಸಿದ್ದರು. ಆದ್ರೆ, ಈಗ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಿದ್ದರಾಮಯ್ಯನವರ ಹೆಸರು ಘೋಷಣೆ ಮಾಡಲಾಯ್ತು. ಈ ವೇಳೆ ಸಿದ್ದರಾಮಯ್ಯ ಆಶ್ಚರ್ಯಗೊಂಡರು. ಕೊನೆಗೆ ಗಣ್ಯರ ಒತ್ತಾಯದ ಮೇರೆಗೆ ಸಿದ್ದರಾಮಯ್ಯನವರು ಡಾಕ್ಟರೇಟ್ ಪದವಿ ಸ್ವೀಕರಿಸಿದರು.

ಕಬ್ಬು ಬೆಳೆಗಾರರ ಸಮಸ್ಯೆ ಕುರಿತು ರೈತ ಮುಖಂಡರ ಸಭೆ ಯಶಸ್ವಿ

ಹುಬ್ಬಳ್ಳಿ, ಅ.19: ಕಬ್ಬು ಬೆಳೆಗಾರರ ಸಮಸ್ಯೆ ಕುರಿತು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ನೇತೃತ್ವದಲ್ಲಿ ಕಬ್ಬು ಬೆಳೆಗಾರರೊಂದಿಗೆ ನಡೆದ ಮಹತ್ವದ ಸಭೆ ಯಶಸ್ವಿಯಾಗಿದೆ.

ಸೋಮವಾರ ತಡರಾತ್ರಿ ಹುಬ್ಬಳ್ಳಿಯಲ್ಲಿ ನಡೆದ ಈ ಸಭೆಯಲ್ಲಿ ರೈತ ಮುಖಂಡ ಹಾಗೂ ಹೋರಾಟದ ನೇತೃತ್ವ ಮಹಿಸಿರುವ ಚೂನಪ್ಪ ಪೂಜಾರಿ, ಶಶಿಕಾಂತ್ ಗುರೂಜಿ ಸೇರಿದಂತೆ ಎಂಟು ರೈತ ಮುಖಂಡರು ಭಾಗವಹಿಸಿದ್ದರು.

ಸಂಸದ ಜಗದೀಶ್ ಶೆಟ್ಟರ್, ಮಹೇಶ್ ಟೆಂಗಿನಕಾಯಿ, ಸಿ.ಸಿ. ಪಾಟೀಲ್, ಧಾರವಾಡ ಜಿಲ್ಲಾಧಿಕಾರಿ ಮತ್ತು ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಸಭೆಯಲ್ಲಿ ಪ್ರಲ್ಹಾದ್ ಜೋಶಿ, ರೈತ ನಾಯಕರ ಆರೋಗ್ಯ ವಿಚಾರಿಸಿ, ಅವರ ಬೇಡಿಕೆಗಳನ್ನು ಆಲಿಸಿದರು. ರೈತರು ಎದುರಿಸುತ್ತಿರುವ ಸಮಸ್ಯೆಗಳು, ಕಬ್ಬಿಗೆ ಸೂಕ್ತ ಬೆಲೆ, ಬಾಕಿ ಪಾವತಿ, ಕಬ್ಬು ಸಾಗಣೆ ವೆಚ್ಚ ಹಾಗೂ ಸಕ್ಕರೆ ಕಾರ್ಖಾನೆಗಳ ಕಾರ್ಯವೈಖರಿ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು.

ರೈತರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಸ್ಪಂದಿಸಬೇಕು. ಕಬ್ಬು ಬೆಳೆಗಾರರ ಹಿತ ಕಾಪಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ರೈತ ಮುಖಂಡರು ಆಗ್ರಹಿಸಿದರು. ಕನಿಷ್ಠ ಬೆಂಬಲ ಬೆಲೆ ಹೆಚ್ಚಳ, ವಾಣಿಜ್ಯ ಸಕ್ಕರೆ ಮಾರಾಟ ಮತ್ತು ಎಥೆನಾಲ್ ದರ 100 ರೂಪಾಯಿ ನಿಗದಿಪಡಿಸುವ ಕುರಿತು ರೈತರು ಒತ್ತಾಯಿಸಿದರು.

ಟಿಬಿ ಡ್ಯಾಂನಿಂದ ನ.20ರವರೆಗೆ ಕಾಲುವೆಗೆ ನೀರು ಹರಿಸಲು ನಿರ್ಧಾರ: ಸಚಿವ ಶಿವರಾಜ್ ತಂಗಡಗಿ

ಬೆಂಗಳೂರು, ಅ.21: ತುಂಗಭದ್ರಾ ಅಣೆಕಟ್ಟೆಯಿಂದ ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ಕುಡಿಯಲು ಮತ್ತು ನಿಂತ ಬೆಳೆಗಳಿಗೆ ನ.20ರವರೆಗೆ ನೀರು ಒದಗಿಸಲು ತೀರ್ಮಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ, ನೀರಾವರಿ ಸಲಹಾ ಸಮಿತಿ ಅಧ್ಯಕ್ಷರಾದ ಶಿವರಾಜ್. ಎಸ್. ತಂಗಡಗಿ ಹೇಳಿದ್ದಾರೆ.

ವಿಕಾಸಸೌಧದಲ್ಲಿ ಸೋಮವಾರ ನಡೆದ ತುಂಗಭದ್ರಾ ನೀರಾವರಿ ಸಲಹಾ ಸಮಿತಿ ಸಭೆ ಬಳಿಕ ಮಾತನಾಡಿ, ಪ್ರಸ್ತುತ ಜಲಾಶಯದಲ್ಲಿ ನೀರಿನ 53 ಟಿಎಂಸಿ ಇದ್ದು, ಇದರಲ್ಲಿ ಇದರಲ್ಲಿ ಡೆಡ್ ಸ್ಟೋರೆಜ್ 2 ಟಿಎಂಸಿ, ಅವಿಯಾಗುವಿಕೆ 3.50 ಟಿಎಂಸಿ, ಈ ಪೈಕಿ ರಾಜ್ಯದ ಪಾಲು 25.25 ಟಿಎಂಸಿ, ಆಂಧ್ರಪ್ರದೇಶ 18.50 ಟಿಎಂಸಿ, ತೆಲಂಗಾಣದ ಪಾಲು 1.50 ಟಿಎಂಸಿ ಇದೆ. ಈ ಹಿನ್ನೆಲೆಯಲ್ಲಿ ಜಲಾಶಯದಲ್ಲಿನ ನೀರಿನ ಲಭ್ಯತೆ ಆಧಾರಿಸಿ ನಾಲ್ಕು ಜಿಲ್ಲೆಗಳಿಗೆ ಕುಡಿಯುವ ನೀರು ಹಾಗೂ ನಿಂತ ಬೆಳೆಗಳಿಗೆ ನೀರನ್ನು ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು. ತುಂಗಭದ್ರಾ ಎಡದಂಡೆ ಮುಖ್ಯಕಾಲುವೆ ಮೂಲಕ ಅ.21ರಿಂದ ನ.20ರವರೆಗೆ 3800 ಕ್ಯೂಸೆಕ್‌ನಂತೆ ಪ್ರತಿ ವಿಭಾಗದಿಂದ 200 ಕ್ಯೂಸೆಕ್‌ನಂತೆ ಉಳಿತಾಯ ಮಾಡಿ ಗಣೇಕಲ್ ಜಲಾಶಯಕ್ಕೆ ನೀರು ಒದಗಿಸುವುದು. ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆಗೆ ಅ.21ರಿಂದ ಅ.24ರವರೆಗೆ 1000 ಕ್ಯೂಸೆಕ್ಸ್ ನಂತೆ, ಅ.25ರಿಂದ ಅ.31ರವರೆಗೆ ನೀರು ನಿಲುಗಡೆ, ನ.1ರಿಂದ ನ.20ರವರೆಗೆ 20 ದಿನಗಳಿಗೆ 1280 ಕ್ಯೂಸೆಕ್‌ನಂತೆ ನೀರು ಹರಿಸಲಾಗುವುದು ಎಂದು ತಿಳಿಸಿದರು.

ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆಗೆ ಅ.21ರಿಂದ ನ.20ರವರೆಗೆ 650 ಕ್ಯೂಸೆಕ್ಸ್ ನಂತೆ, ರಾಯವಸವಣ್ಣ ಕಾಲುವೆಗೆ 2026, ಅ.21ರಿಂದ 2027ರ ಮೇ 31ರವರೆಗೆ 180 ಕ್ಯೂಸೆಕ್‌ನಂತೆ ತಿಂಗಳಲ್ಲಿ 10 ದಿನ ನಿಲುಗಡೆ ಮಾಡಿ ಹತ್ತು ದಿನ ನೀರು ಹರಿಸಲಾಗುವುದು. ಎಡದಂಡೆ ವಿಜಯನಗರ ಕಾಲುವೆಗೆ ಅ.21ರಿಂದ 2027 ಮೇ 5ರವರೆಗೆ 60 ಕ್ಯೂಸೆಕ್‌ನಂತೆ ನೀರಿನ ಲಭ್ಯತೆ ಆಧಾರದ ಮೇಲೆ ನೀರು ಹರಿಸಲಾಗುವುದು ಎಂದು ವಿವರಿಸಿದರು.

ಕ್ಯಾನ್ಸರ್ ಔಷಧ ಹೊರೆ ತಗ್ಗಿಸಿದ ಕೇಂದ್ರ ಸರ್ಕಾರಕ್ಕೆ ಬಿ.ವೈ.ವಿಜಯೇಂದ್ರ ಅಭಿನಂದನೆ

ಬೆಂಗಳೂರು, ಅ.19: ಕ್ಯಾನ್ಸರ್ ಚ

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಅಕ್ಟೋಬರ್, 20, 2026, ಮಂಗಳವಾರ



ನಾಡಿನ ಸಮಸ್ತ ಜನತೆಗೆ, ಓದುಗರಿಗೆ ಹಿತೈಷಿಗಳಿಗೆ ಮಹಾನವಮಿ, ಆಯುಧಪೂಜೆ, ವಿಜಯದಶಮಿಯ ಶುಭಾಶಯಗಳು

ಕಚೇರಿಗೆ ಬಿಡುವು

ಹಬ್ಬದ ಪ್ರಯುಕ್ತ ಕಚೇರಿಗೆ ಮಂಗಳವಾರ ಬಿಡುವು ಇರುವುದರಿಂದ 21-10-2026 ಬುಧವಾರದ ಸಂಚಿಕೆ ಪ್ರಕಟವಾಗುವುದಿಲ್ಲ

– ಸಂಪಾದಕರು,
ದೆಹಲಿ ವಾರ್ತೆ

ಕಬ್ಬು ಬೆಳೆಗಾರರ ಬೇಡಿಕೆಗಳಿಗೆ ತಕ್ಷಣ ಸ್ಪಂದಿಸಿ: ಪ್ರಧಾನಿಗೆ ಮನವಿ

ಬೆಂಗಳೂರು, ಅ.19: ಸದ್ಯದಲ್ಲೇ ಕಬ್ಬು ಅರೆಯುವ ಋತು ಆರಂಭವಾಗಲಿದ್ದು, ಕರ್ನಾಟಕದ ಕಬ್ಬು ಬೆಳೆಗಾರರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತುರ್ತಾಗಿ ಮಧ್ಯಪ್ರವೇಶಿಸಬೇಕು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿಗೆ ಮನವಿ ಮಾಡಿದ್ದಾರೆ.

ಕಬ್ಬು ಬೆಳೆಗಾರರ ಬೇಡಿಕೆ ಸಂಬಂಧ ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೋಮವಾರ ಪತ್ರ ಬರೆದಿದ್ದು, ಕಬ್ಬು ಬೆಳೆಗಾರರ ಹಿತ ಕಾಯಲು ರಾಜ್ಯ ಸರ್ಕಾರ ತನ್ನ ವ್ಯಾಪ್ತಿಯಲ್ಲಿ ಎಲ್ಲ ಅಗತ್ಯ ಕ್ರಮ ಕೈಗೊಂಡಿದೆ. ಆದರೆ ರೈತರ ಪ್ರಮುಖ ಬೇಡಿಕೆಗಳನ್ನು ಭಾರತ ಸರ್ಕಾರ ಮಾತ್ರ ಈಡೇರಿಸಲು ಸಾಧ್ಯ. ಲಕ್ಷಾಂತರ ಕಬ್ಬು ಬೆಳೆಗಾರರ ಮತ್ತು ಕರ್ನಾಟಕದ ಜನರ ಹಿತದೃಷ್ಟಿಯಿಂದ ನಿಮ್ಮ ತುರ್ತಾಗಿ ಮಧ್ಯಪ್ರವೇಶ ಮಾಡುವಂತೆ ಮನವಿ ಮಾಡಿದ್ದಾರೆ.

ಸಕ್ಕರೆಯ ಕನಿಷ್ಠ ಮಾರಾಟ ಬೆಲೆ ಫೆಬ್ರವರಿ 2019ರಿಂದ ಪ್ರತಿ ಕೆಜಿಗೆ 31ರಲ್ಲೇ ಉಳಿದಿದೆ, ಆದರೆ ಎಫ್‌ಆರ್‌ಪಿ ಪ್ರತಿ ಟನ್‌ಗೆ 2,750ರಿಂದ 3,650ಕ್ಕೆ ಏರಿದೆ. 2019ರ ಸಕ್ಕರೆ ಬೆಲೆಯಲ್ಲಿ ಕಾರ್ಖಾನೆಗಳು ಕಬ್ಬಿಗೆ ನ್ಯಾಯಯುತ ಬೆಲೆಯನ್ನು ಪಾವತಿಸಲು ಸಾಧ್ಯವಿಲ್ಲ. ಹೀಗಾಗಿ ಸಕ್ಕರೆಯ ಕನಿಷ್ಠ ಮಾರಾಟ ಬೆಲೆಯನ್ನು ಪರಿಷ್ಕರಿಸಿ ಎಂದು ಕೋರಿದ್ದಾರೆ. ಹಾಗೂ ಗೃಹ ಮತ್ತು ವಾಣಿಜ್ಯ ಬಳಕೆ ಸಕ್ಕರೆಗೆ ಪ್ರತ್ಯೇಕ ಎಂಎಸ್‌ಪಿ ನಿಗದಿಪಡಿಸುವಂತೆ ಸಿಎಂ ಮನವಿ ಮಾಡಿದರು. ಈ ಕ್ರಮವು ಗೃಹಬಳಕೆಯ ಗ್ರಾಹಕರನ್ನು ರಕ್ಷಿಸುತ್ತದೆ. ಬೃಹತ್ ವಾಣಿಜ್ಯ ಖರೀದಿದಾರರು ನ್ಯಾಯಯುತ ಬೆಲೆಯನ್ನು ಪಾವತಿಸುವಂತೆ ಮಾಡುತ್ತದೆ" ಎಂದು ವಿವರಿಸಿದ್ದಾರೆ.

ಎಥೆನಾಲ್ ಬೆಲೆ ಪರಿಷ್ಕರಿಸಿ: ಕಬ್ಬಿಗೆ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಲ್ಲಿ ವಾರ್ಷಿಕ ಹೆಚ್ಚಳವಾಗುತ್ತಿದ್ದರೂ, ಕಬ್ಬಿನ ಹಾಲು ಮತ್ತು ಬಿ-ಹೆವಿ ಮೋಲಾಸಿಸ್‌ಗಳಿಂದ ಉತ್ಪಾದಿಸುವ ಎಥನಾಲ್ ಬೆಲೆಗಳು 2022-23ರಿಂದ ಬದಲಾಗದೆ ಉಳಿದಿವೆ. ಇದಕ್ಕೆ ವ್ಯತಿರಿಕ್ತವಾಗಿ, ಧಾನ್ಯ ಆಧಾರಿತ ಎಥನಾಲ್ ಬೆಲೆಗಳನ್ನು ಕಳೆದ ಕೆಲವು ವರ್ಷಗಳಿಂದ ಹೆಚ್ಚಿಸಲಾಗಿದೆ. ಆದ್ದರಿಂದ, ಹೆಚ್ಚುತ್ತಿರುವ ಕಬ್ಬಿನ ವೆಚ್ಚವನ್ನು ಸರಿದೂಗಿಸಲು ಕಬ್ಬು ಆಧಾರಿತ ಎಥನಾಲ್ ಬೆಲೆಯನ್ನು ಸೂಕ್ತವಾಗಿ ಪರಿಷ್ಕರಿಸಬೇಕು. ಈ ಹಿಂದೆ ಮೂಲ ಇಳುವರಿಯು ಶೇ.9.50ರಷ್ಟಿತ್ತು ಮತ್ತು ಅದನ್ನು ಹಂತ ಹಂತವಾಗಿ ಶೇ.10.25ಕ್ಕೆ ಹೆಚ್ಚಿಸಲಾಗಿದೆ. ಇಳುವರಿಯು ಈ ಮೂಲ ಮಟ್ಟಕ್ಕಿಂತ ಕಡಿಮೆಯಾದಾಗ ಎಫ್‌ಆರ್‌ಪಿ ಕಡಿಮೆಯಾಗುತ್ತದೆ. ಆದರೆ ಸಕ್ಕರೆ ಇಳುವರಿಯು ಮಣ್ಣು, ಹವಾಮಾನ ಮತ್ತು ಕಬ್ಬು ಅರೆಯುವ ಸಮಯವನ್ನು ಅವಲಂಬಿಸಿರುತ್ತದೆ. ಇವು ರೈತನ ನಿಯಂತ್ರಣದಲ್ಲಿರುವುದಿಲ್ಲ. ಪರಿಣಾಮವಾಗಿ, ಕಡಿಮೆ ಇಳುವರಿ ಇರುವ ಪ್ರದೇಶಗಳ ರೈತರಿಗೆ ಮೂಲ ಎಫ್‌ಆರ್‌ಪಿ ಕೂಡ ಸಿಗುತ್ತಿಲ್ಲ. ಆದ್ದರಿಂದ, ಮೂಲ ಇಳುವರಿಯನ್ನು ಮತ್ತೆ ಶೇ. 9.50ಕ್ಕೆ ತರಬೇಕು" ಎಂದು ಡಿ.ಕೆ. ಶಿವಕುಮಾರ್ ಕೋರಿದ್ದಾರೆ.

ಸಕ್ಕರೆಯ ಕನಿಷ್ಠ ಮಾರಾಟ ಬೆಲೆ ಪರಿಷ್ಕರಿಸಿ: ನರೇಂದ್ರ ಮೋದಿಗೆ ಸಿಎಂ ಡಿ.ಕೆ. ಶಿವಕುಮಾರ್ ಪತ್ರ

ಸಮಿತಿ ರಚನೆಗೆ ಸ್ವಾಗತ

ಕಬ್ಬು ಬೆಳೆಗಾರರು ಮತ್ತು ಸಕ್ಕರೆ ವಲಯದ ಸಮಸ್ಯೆಗಳನ್ನು ಪರಿಶೀಲಿಸಲು ನೀತಿ ಆಯೋಗದ ಮಾಜಿ ಸದಸ್ಯ ರಮೇಶ್ ಚಂದ್ ಅಧ್ಯಕ್ಷತೆಯಲ್ಲಿ 2026ರ ಅ.14ರಂದು ಕೇಂದ್ರ ಸರ್ಕಾರ ರಚಿಸಿರುವ ಸಮಿತಿಯನ್ನು ಕರ್ನಾಟಕ ಸರ್ಕಾರವು ಸ್ವಾಗತಿಸುತ್ತದೆ. ರಾಜ್ಯವು ಸಂಪೂರ್ಣವಾಗಿ ಭಾಗವಹಿಸಿ ತನ್ನ ಅಂಕಿಅಂಶಗಳನ್ನು ಹಂಚಿಕೊಳ್ಳುತ್ತದೆ. ಆದಾಗ್ಯೂ, ಕರ್ನಾಟಕದಲ್ಲಿ ಕಬ್ಬು ನುರಿಸುವ ಹಂಗಾಮು ಈಗಾಗಲೇ ವಿಳಂಬವಾಗಿದ್ದು, ರೈತರು ಭಾರತ ಸರ್ಕಾರದಿಂದ ಶೀಘ್ರ ಭರವಸೆಯನ್ನು ನಿರೀಕ್ಷಿಸುತ್ತಿದ್ದಾರೆ. ಸಮಿತಿಯು ತನ್ನ ಕೆಲಸವನ್ನು ಮುಂದುವರಿಸುತ್ತಿರುವಂತೆಯೇ ಕೆಲವು ನಿರ್ಧಾರಗಳನ್ನು ತುರ್ತಾಗಿ ತೆಗೆದುಕೊಳ್ಳುವಂತೆ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

ಸಮಸ್ಯೆಗೆ ಪ್ರಧಾನಿಯಿಂದ ಪರಿಹಾರ ದೊರೆಯಲಿದೆ: ಮುಖ್ಯಮಂತ್ರಿ ವಿಶ್ವಾಸ

ಕಬ್ಬು ಬೆಳೆಗಾರರ ವಿಚಾರವಾಗಿ ಪ್ರಧಾನಿಗಳಿಗೆ ಪತ್ರ ಬರೆದಿದ್ದೇನೆ. ಅವರಿಂದ ಸಮಸ್ಯೆಗೆ ಪರಿಹಾರ ಸಿಗುವ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಕಬ್ಬು ಬೆಳೆಗಾರರ ಹಿತಕಾಪಾಡಲು ಪ್ರಯತ್ನ ಪಟ್ಟಿದ್ದೇನೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಪ್ರಯತ್ನ ಪಟ್ಟು, ಕೊನೆಗೆ ಮತ್ತೆ ಕಾಂಗ್ರೆಸ್ ಮೇಲೆ ಹಾಕಿದ್ದಾರೆ. ಕೇಂದ್ರ ಸರ್ಕಾರದ ಬಗ್ಗೆ ಈಗ ಏನು ಮಾತನಾಡುವುದಿಲ್ಲ. ಕಬ್ಬು ಬೆಳೆಗಾರರ ಸಮಸ್ಯೆಯನ್ನು ಎಲ್ಲರೂ ಸೇರಿ ಬಗೆಹರಿಸಬೇಕು" ಎಂದು ಹೇಳಿದರು. ಮುಂದಿನ ವಾರ ಬರದ ವಿಚಾರವಾಗಿ ಸರ್ವಪಕ್ಷಗಳ ನಿಯೋಗದೊಂದಿಗೆ ಪ್ರಧಾನಿಗಳನ್ನು ಭೇಟಿಯಾಗಿ ಮನವಿ ಮಾಡುತ್ತೇವೆ. ವಿರೋಧ ಪಕ್ಷದವರೂ ಕೂಡ ಬರುತ್ತೇವೆ ಎಂದು ಹೇಳಿದ್ದಾರೆ. ಬರಗಾಲ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ದೇಶದ ಎಲ್ಲಾ ಕಡೆ ಇದೆ. ದಸರಾ ಮುಗಿದು ರಾಜ್ಯೋತ್ಸವದ ನಡುವೆ ಮಧ್ಯದಲ್ಲಿ ಪ್ರಧಾನಿಗಳು ಸಮಯ ಕೊಟ್ಟರೆ ಹೋಗಿ ಮಾತನಾಡುತ್ತೇನೆ" ಎಂದರು.

ಟೈಗರ್ ಶ್ರಾಫ್ ಹತ್ಯೆ ಯತ್ನ ಯಾರನ್ನೂ ಬಿಡುವುದಿಲ್ಲ ಫಡ್ನವೀಸ್ ಎಚ್ಚರಿಕೆ

ಮುಂಬೈ, ಅ.19: ನಟ ಟೈಗರ್ ಶ್ರಾಫ್ ಅವರ ಹತ್ಯೆಗೆ ನಡೆದ ಪ್ರಯತ್ನದಲ್ಲಿ ಭಾಗಿಯಾದ ಯಾರನ್ನೂ ಬಿಡುವ ಮಾತೇ ಇಲ್ಲ ಎಂದು ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದ ಶಂಕಿತರನ್ನು ಮುಂಬೈ ಪೊಲೀಸರು ಈಗಾಗಲೇ ಗುರುತಿಸಿ ವಶಕ್ಕೆ ಪಡೆದಿದ್ದು, ಅವರನ್ನು ಶೀಘ್ರದಲ್ಲೇ ಮುಂಬೈಗೆ ಕರೆತರಲಾಗುವುದು ಎಂದು ತಿಳಿಸಿದ್ದಾರೆ. ವಿರೋಧ ಪಕ್ಷಗಳಿಂದ ತೀವ್ರ ಟೀಕೆಯನ್ನು ಎದುರಿಸುತ್ತಿರುವ ಫಡ್ನವೀಸ್, ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ, ಯಾವ ಗುಂಪು ಅಥವಾ ವ್ಯಕ್ತಿ ಇದರಲ್ಲಿ ಭಾಗಿಯಾಗಿದ್ದರೂ, ಯಾರನ್ನೂ ಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಶಂಕಿತರನ್ನು ಶೀಘ್ರದಲ್ಲೇ ಬಂಧಿಸಲಾಗುವುದು ಮತ್ತು ಮಹಾರಾಷ್ಟ್ರದ ಹೊರಗಿನಿಂದ ಅಥವಾ ವಿದೇಶದಿಂದ ಈ ಸಂಚು ರೂಪಿಸಿದ ಪ್ರಮುಖ ಸೂತ್ರಧಾರಿಗಳನ್ನು ಪತ್ತೆಹಚ್ಚಲಾಗುವುದು ಎಂದು ಫಡ್ನವೀಸ್ ಹೇಳಿದರು.

ಸಿಜೆಪಿ ನಾಯಕರ ಕಸ್ಟಡಿ 2ದಿನ ವಿಸ್ತರಣೆ

ನವದೆಹಲಿ, ಅ.19: ಅಕ್ರಮವಾಗಿ ಜಂತರ್ ಮಂತರ್ ಪ್ರವೇಶಿಸಿದ ಆರೋಪದ ಮೇಲೆ ಬಂಧಿತರಾಗಿರುವ ಕಾಕ್ರೋಚ್ ಜನತಾ ಪಕ್ಷ ಮುಖಂಡರಾದ ಸೌರವ್ ದಾಸ್ ಮತ್ತು ಆಶುತೋಷ್ ರಂಕಾ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಇನ್ನೂ ಎರಡು ದಿನಗಳ ಕಾಲ ವಿಸ್ತರಿಸಿ ಸೋಮವಾರ ಆದೇಶಿಸಿದ್ದಾರೆ.

ಆಶುತೋಷ್ ರಾಂಕಾ, ಸೌರವ್ ದಾಸ್ ಅವರನ್ನು ಮಂದಿರ್ ಮಾರ್ಗ್ ಪೊಲೀಸ್ ಠಾಣೆಯಲ್ಲಿ ನೂತನವಾಗಿ ನೇಮಕಗೊಂಡ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಯಿತು. ಈ ವೇಳೆ ಅವರನ್ನು ಇನ್ನೂ ಎರಡು ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುವಾಗ ನಿರ್ಬಂಧಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ, ಅಕ್ಟೋಬರ್ 13 ರಂದು ಈ ಇಬ್ಬರನ್ನು ಬಂಧಿಸಲಾಗಿತ್ತು. ನಂತರ ಐದು ದಿನಗಳ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿತ್ತು. ಇದೀಗ, ಆಶುತೋಷ್ ರಾಂಕಾ, ಸೌರವ್ ದಾಸ್ ಬಿಡುಗಡೆಯನ್ನು ತಡೆಯುವ ಉದ್ದೇಶದಿಂದಲೇ ಜಾಮೀನು ಪ್ರಕ್ರಿಯೆಗಳನ್ನು ಉದ್ದೇಶ ಪೂರ್ವಕವಾಗಿ ವಿಳಂಬಗೊಳಿಸಲಾಗುತ್ತಿದೆ ಎಂದು ಸಿಜೆಪಿ ಆರೋಪಿಸಿದೆ. ಜಂತರ್ ಮಂತರ್ ಪ್ರತಿಭಟನಾ ಸ್ಥಳವೆಂಬ ಸ್ಥಾನಮಾನವನ್ನು ತೆಗೆದುಹಾಕಲಾಗಿತ್ತು. ಆದರೂ, ಅಲ್ಲಿನ ಬೀಗ ಹಾಕಿದ್ದ ಗೇಟ್ ಅನ್ನು ಹತ್ತಿ ಒಳಗೆ ಪ್ರವೇಶಿಸಿದ ಆರೋಪದ ಮೇಲೆ ಈ ಇಬ್ಬರನ್ನು ವಶಕ್ಕೆ ಪಡೆಯಲಾಗಿತ್ತು. ಬಂಧಿತ ಸಿಜೆಪಿ ಮುಖಂಡರು, ಇತರ ಕಾರ್ಯಕರ್ತರೊಂದಿಗೆ ಸೇರಿ, ಅಲ್ಲಿ ರಾಷ್ಟ್ರಧ್ವಜವನ್ನು ಪ್ರದರ್ಶಿಸಿದರು ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧ ಘೋಷಣೆಗಳನ್ನು ಕೂಗಿದ್ದರು. ಬಳಿಕ ಅವರನ್ನು ಪೊಲೀಸರು ವಶಕ್ಕೆ ಪಡೆದು, ಮುಂಜಾಗ್ರತಾ ಕ್ರಮವಾಗಿ ಬಂಧಿಸಿದ್ದರು.

ಮಹಾನವಮಿಯ ನಿಮಿತ್ತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪತ್ನಿ ಉಷಾ ಅವರೊಂದಿಗೆ ಸೋಮವಾರ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಪೂಜೆ ನೆರವೇರಿಸಿದರು.

ಫಲಿಸಿದ ಜೋಶಿ ಸಂಧಾನ: ಕಬ್ಬು ಬೆಳೆಗಾರರ ಹೋರಾಟ ಅಂತ್ಯ

ಧಾರವಾಡ: ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರ ಭರವಸೆ ಹಿನ್ನೆಲೆಯಲ್ಲಿ, ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಬ್ಬು ಬೆಳೆಗಾರರು ಕಳೆದ ಒಂದು ವಾರದಿಂದ ನಡೆಸುತ್ತಿದ್ದ ಪಾದಯಾತ್ರೆ ಸೋಮವಾರ ಅಂತ್ಯವಾಗಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಕಳೆದೊಂದು ವಾರದಿಂದ ಚುರುಕು ಮುಟ್ಟಿಸಿದ್ದ ಹೋರಾಟಗಾರರು ಕೆಲವು ಷರತ್ತುಗಳನ್ನು ಇಟ್ಟು ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದಾರೆ.

ಕಳೆದೊಂದು ವಾರದಿಂದ ಕಬ್ಬು ಬೆಳೆಗಾರರು ಧಾರವಾಡ ತಾಲೂಕಿನ ಯರಿಕೊಪ್ಪ ಗ್ರಾಮದ ಬಳಿ ಧರಣಿ ಕುಳಿತಿದ್ದರು. ಎರಡು ದಿನಗಳ ಕಾಲ ಹೆದ್ದಾರಿ ಬಂದ್ ಮಾಡಿದ್ದ ರೈತರು ಬಳಿಕ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಗಮನಿಸಿ, ಹೆದ್ದಾರಿ ಬಂದ್ ಮರಳಿ ಪಡೆದಿದ್ದರು. ಆದರೆ ಹೆದ್ದಾರಿ ಪಕ್ಕದಲ್ಲಿ ಟೆಂಟ್ ಹಾಕಿ ಹೋರಾಟವನ್ನು ಮುಂದುವರಿಸಿದ್ದರು.

ಭಾನುವಾರ ತಡರಾತ್ರಿ ಹುಬ್ಬಳ್ಳಿಯಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹಾಗೂ ರೈತ ನಾಯಕರು ಭಾಗವಹಿಸಿದ್ದರು. ಈ ವೇಳೆ ತಜ್ಞರ ಸಮಿತಿಯ ವರದಿ ಬಂದ ಬಳಿಕ ನಿರ್ಧಾರ ತೆಗೆದುಕೊಳ್ಳುವುದಾಗಿ ಜೋಶಿ ಭರವಸೆ ನೀಡಿದ ಬಳಿಕ ಹೋರಾಟ ಸ್ಥಗಿತಗೊಳಿಸಲು ನಿರ್ಧರಿಸಲಾಯಿತು.

ಬಳಿಕ ಸೋಮವಾರ ಯರಿಕೊಪ್ಪ ಕ್ರಾಸ್ ಬಳಿ ಬಹಿರಂಗ ಸಭೆ ಸೇರಿದ್ದ ರೈತರ ಸಭೆಯಲ್ಲಿ ಮಾತನಾಡಿದ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ, ಕೇಂದ್ರ ಸಚಿವರು ಭರವಸೆ ನೀಡಿದ್ದಾರೆ. ಕನಿಷ್ಠ ಬೆಂಬಲ ಬೆಲೆ ವಿಚಾರವಾಗಿ ಕಾಲಾವಕಾಶ ಕೇಳಿದ್ದು, ಅವರ ಮಾತಿಗೆ ಬೆಲೆ ನೀಡಿ ಎಲ್ಲರೂ ಅವಕಾಶ ನೀಡೋಣ. ಮುಂದಿನ ನಾಲ್ಕೈದು ದಿನಗಳಲ್ಲಿ ಬೆಳಗಾವಿಯಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ರೈತ ಮುಖಂಡರ ಸಭೆ ನಡೆಯಬೇಕು. ಅಲ್ಲದೆ, ಕಾರ್ಖಾನೆಗಳಿಂದ ಸಕ್ಕರೆ ಹೊರಗೆ ಸಾಗಣೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನ.27ರಂದು ಎಲ್ಲರೂ ಹೋರಾಟಕ್ಕೆ ಸಿದ್ಧರಿರೋಣ: ನಮ್ಮ ಬೇಡಿಕೆ ಈಡೇರಿಸಲು ನವೆಂಬರ್ 26ರವರೆಗೆ ಅವರಿಗೆ ಕಾಲಾವಕಾಶ ನೀಡಲಾಗಿದೆ. ಅಷ್ಟರಲ್ಲಿ ಬೇಡಿಕೆ ಈಡೇರಿಸಬೇಕು. ಅಲ್ಲದೆ, ಸಿಎಂ ಅವರು ಸುವರ್ಣ ಸೌಧದಲ್ಲಿ ಸಭೆ ಮಾಡಬೇಕು. ಸಿಎಂ ಹಾಗೂ ಕೇಂದ್ರ ಸಚಿವರ ಮಾತಿಗೆ ನಾವೆಲ್ಲ ಬೆಲೆ ಕೋಡೋಣ. ಒಂದು ವೇಳೆ ನಮ್ಮ ಬೇಡಿಕೆ ಈಡೇರದಿದ್ದರೆ ಒಂದು ಕೋಟಿ ರೈತರಿಂದ ಪ್ರತಿಭಟನೆ ನಡೆಸಲಾಗುವುದು. ನ.27ರಂದು ಎಲ್ಲರೂ ಹೋರಾಟಕ್ಕೆ ಸಿದ್ಧರಿರೋಣ ಎಂದರು.

ದೆಹಲಿಯ ಜಾಮಾ ಮಸೀದಿ ಮೆಟ್ರೋ ನಿಲ್ದಾಣದಲ್ಲಿ ಅನುಮಾನಾಸ್ಪದ ವ್ಯಕ್ತಿ ವಶಕ್ಕೆ

ನವದೆಹಲಿ, ಅ.19: ದೆಹಲಿಯ ಜಾಮಾ ಮಸೀದಿ ಮೆಟ್ರೋ ನಿಲ್ದಾಣದಲ್ಲಿ ಭದ್ರತಾ ತಪಾಸಣೆ ವೇಳೆ ಅನುಮಾನಾಸ್ಪದವಾಗಿ ವರ್ತಿಸಿ ಪರಾರಿಯಾಗಲು ಯತ್ನಿಸಿದ ಪ್ರಯಾಣಿಕನನ್ನು ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ.

ಆತನ ಒಳಉಡುಪಿನ ಹೊಲಿಗೆಯ ಭಾಗದಲ್ಲಿ ಗುರುತಿಸಲಾಗದ ಅರೆ ಘನವಸ್ತು ಪತ್ತೆಯಾಗಿದ್ದು, ಹೆಚ್ಚಿನ ತನಿಖೆಗಾಗಿ ಆತನನ್ನು ಪೊಲೀಸರಿಗೆ ಹಸ್ತಾಂತರಿಸಲಾಗಿದೆ.

ಅಕ್ಟೋಬರ್ 17ರಂದು ಈ ಘಟನೆ ನಡೆದಿದ್ದು, ಅಕ್ಟೋಬರ್ 19ರಂದು ಸಿಐಎಸ್‌ಎಫ್ ಈ ಕುರಿತು ಮಾಹಿತಿ ನೀಡಿದೆ. ಮೆಟ್ರೋ ನಿಲ್ದಾಣದಲ್ಲಿ ಪ್ರಯಾಣಿಕರ ಸಾಮಾನುಗಳನ್ನು ಎಕ್ಸ್‌ರೇ ಬ್ಯಾಗೇಜ್ ತಪಾಸಣಾ ಯಂತ್ರದ ಮೂಲಕ ಪರಿಶೀಲಿಸುತ್ತಿದ್ದಾಗ, ಪರದೆಯ ಮೇಲೆ ದಟ್ಟವಾದ ಅನುಮಾನಾಸ್ಪದ ವಸ್ತುವೊಂದು ಕಾಣಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಸಿಬ್ಬಂದಿ ಪ್ರಯಾಣಿಕನನ್ನು ಹೆಚ್ಚಿನ ತಪಾಸಣೆಗೆ ಒಳಪಡಿಸಲು ಮುಂದಾಗಿದ್ದಾರೆ.

ಈ ವೇಳೆ ಪ್ರಯಾಣಿಕ ಭದ್ರತಾ ತಪಾಸಣೆಯಿಂದ ತಪ್ಪಿಸಿಕೊಂಡು ಓಡಿಹೋಗಲು ಯತ್ನಿಸಿದ್ದಾನೆ. ತಕ್ಷಣ ಕಾರ್ಯಪ್ರವೃತ್ತರಾದ ಸಿಐಎಸ್‌ಎಫ್ ಸಿಬ್ಬಂದಿ ಆತನನ್ನು ಬೆನ್ನಟ್ಟಿ ನಿಲ್ದಾಣದ ನಿರ್ಗಮನ ದ್ವಾರದ ಸಮೀಪ ಹಿಡಿದಿದ್ದಾರೆ. ಬಳಿಕ ಆತನ ಸಾಮಾನುಗಳನ್ನು ಪರಿಶೀಲಿಸಿದಾಗ, ಒಳಉಡುಪಿನ ಹೊಲಿಗೆ ಹಾಕಿದ ಭಾಗದಲ್ಲಿ ಅಡಗಿಸಿಟ್ಟಿದ್ದ ಗುರುತಿಸಲಾಗದ ಅರೆಘನ ವಸ್ತು ಪತ್ತೆಯಾಗಿದೆ.

ವಿಚಾರಣೆ ವೇಳೆ ತಾನು ಮಲೇಷ್ಯಾದ ಕೌಲಾ ಲಂಪುರದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯ (ಎನ್‌ಆರ್‌ಐ) ಎಂದು ಆತ ಹೇಳಿಕೊಂಡಿದ್ದಾನೆ. ಆತನ ಗುರುತು, ವಶಪಡಿಸಿಕೊಂಡ ವಸ್ತುವಿನ ಸ್ವರೂಪ ಹಾಗೂ ಅದನ್ನು ಸಾಗಿಸುತ್ತಿದ್ದ ಉದ್ದೇಶದ ಬಗ್ಗೆ ಹೆಚ್ಚಿನ ಮಾಹಿತಿ ಇನ್ನಷ್ಟೇ ತಿಳಿದುಬರಬೇಕಿದೆ.

ಸಿಐಎಸ್‌ಎಫ್ ಸಿಬ್ಬಂದಿ ಪ್ರಯಾಣಿಕನನ್ನು ಹಾಗೂ ಆತನ ಸಾಮಾನುಗಳನ್ನು ಪೊಲೀಸರಿಗೆ ಒಪ್ಪಿಸಿದ್ದು, ಪ್ರಕರಣದ ಕುರಿತು ತನಿಖೆ ಮುಂದುವರಿದಿದೆ. ಪತ್ತೆಯಾದ ವಸ್ತು ಯಾವುದು ಎಂಬುದನ್ನು ಅಧಿಕಾರಿಗಳು ಇನ್ನೂ ಸ್ಪಷ್ಟಪಡಿಸಿಲ್ಲ.

ಮೆಟ್ರೋ ನಿಲ್ದಾಣದಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮೆರಾಗಳಲ್ಲಿ ಈ ಘಟನೆಯ ದೃಶ್ಯಗಳು ಸೆರೆಯಾಗಿವೆ.

ಅನುಮಾನಾಸ್ಪದ ವಸ್ತು ಪತ್ತೆಯಾದ ತಕ್ಷಣ ಸಿಐಎಸ್‌ಎಫ್ ಸಿಬ್ಬಂದಿ ತ್ವರಿತವಾಗಿ ಕಾರ್ಯಾಚರಣೆ ನಡೆಸಿ ಪ್ರಯಾಣಿಕನನ್ನು ವಶಕ್ಕೆ ಪಡೆದಿದ್ದಾರೆ.

ಜಾಮಾ ಮಸ್ಜ

13 ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜೆಎನ್‌ಯು ವಿದ್ಯಾರ್ಥಿಗಳಿಂದ ರಾಷ್ಟ್ರಪತಿಗೆ ಪತ್ರ

ನವದೆಹಲಿ, ಅ. 19: ಕ್ಯಾಂಪಸ್‌ನಿಂದ ಉಚ್ಚಾಟಿಸಿರುವುದೂ ಸೇರಿ ಪ್ರಮುಖ 13 ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿ ಒಕ್ಕೂಟದ (ಜೆಎನ್‌ಯುಎಸ್‌ಯು) ಪದಾಧಿಕಾರಿಗಳು ಮತ್ತು ವಿದ್ಯಾರ್ಥಿಗಳು ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳ ಉಪವಾಸವು ಸೋಮವಾರ 16ನೇ ದಿನಕ್ಕೆ ಕಾಲಿಟ್ಟಿದೆ. ಈ ಗಂಭೀರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಜಾನ್ ಬ್ರಿಟಾಸ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತುರ್ತು ಪತ್ರ ಬರೆದಿದ್ದು, ತಕ್ಷಣದ ಆಡಳಿತಾತ್ಮಕ ಮಧ್ಯಪ್ರವೇಶಕ್ಕೆ ಮನವಿ ಮಾಡಿದ್ದಾರೆ.

ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆಗಿರುವ ರಾಷ್ಟ್ರಪತಿಗಳಿಗೆ ಅ.18ರಂದು ಬರೆದಿರುವ ಪತ್ರದಲ್ಲಿ; ಜಾಗತಿಕ ಮಟ್ಟದ ಶೈಕ್ಷಣಿಕ ಸಂಸ್ಥೆಯೊಂದರಲ್ಲಿ ಪ್ರತಿಭಟನಾನಿರತ ವಿದ್ಯಾರ್ಥಿಗಳ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದ್ದರೂ ವಿವಿ ಆಡಳಿತ ಮಂಡಳಿ ನಮ್ಮ ನ್ಯಾಯಯುತ ಕಳಕಳಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿದೆ ಎಂದು ಕಟುವಾಗಿ ವಿಮರ್ಶಿಸಿದ್ದಾರೆ.

ವಿದ್ಯಾರ್ಥಿ ಒಕ್ಕೂಟದ ಪದಾಧಿಕಾರಿಗಳ ವಿರುದ್ಧ ಹೊರಡಿಸಲಾಗಿರುವ ಉಚ್ಚಾಟನೆ ಆದೇಶಗಳನ್ನು ತಕ್ಷಣವೇ ರದ್ದುಗೊಳಿಸಬೇಕು. ಲೈಂಗಿಕ ಕಿರುಕುಳ ವಿರುದ್ಧದ ಪ್ರಮುಖ ಲಿಂಗ ಸಂವೇದನಾ ಸಮಿತಿ (ಜಿಎಸ್ಸಿಎಎಸ್‌ಎಚ್) ಮತ್ತು ಸಾಂಪ್ರದಾಯಿಕ ಜೆಎನ್‌ಯು ಪ್ರವೇಶ ಪರೀಕ್ಷಾ ವ್ಯವಸ್ಥೆಯನ್ನು ಪುನರಾರಂಭಿಸುವುದು ಸೇರಿದಂತೆ ಅಮಾನತಿನಲ್ಲಿರುವ ವಿದ್ಯಾರ್ಥಿಗಳ ಪ್ರಮುಖ ಕುಂದುಕೊರತೆಗಳನ್ನು ಶೀಘ್ರವಾಗಿ ಬಗೆಹರಿಸಲು ಕ್ರಮಕೈಗೊಳ್ಳಬೇಕು ಎಂದು ಅವರು ಕೋರಿದ್ದಾರೆ.

ಇದೇ ವಿಷಯವಾಗಿ ಕೇಂದ್ರ ಶಿಕ್ಷಣ ಸಚಿವ ಪ್ರಲ್ಹಾದ್ ಜೋಶಿ ಅವರಿಗೂ ಪ್ರತ್ಯೇಕ ಪತ್ರ ಬರೆದಿರುವ ಸಂಸದರು, ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ವಿದ್ಯಾರ್ಥಿ ಪ್ರತಿನಿಧಿಗಳನ್ನು ಕ್ಯಾಂಪಸ್ಸಿನಿಂದ ಹೊರಗಿಡುತ್ತಿರುವುದು ವಿದ್ಯಾರ್ಥಿ ಒಕ್ಕೂಟದ ಸ್ವತಂತ್ರ ಕಾರ್ಯಾ ಚರಣೆಯನ್ನೇ ದುರ್ಬಲಗೊಳಿಸುತ್ತಿದೆ. ಸಾಮೂಹಿಕ ಧ್ವನಿಯನ್ನು ಹತ್ತಿಕ್ಕುವ ಯತ್ನವಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.



■ 16 ದಿನ ಪೂರೈಸಿದ ಜೆಎನ್‌ಯು ವಿದ್ಯಾರ್ಥಿಗಳ ಉಪವಾಸ ಸತ್ಯಾಗ್ರಹ

ವಿಶ್ವವಿದ್ಯಾಲಯ ಜಾರಿಗೆ ತಂದಿರುವ ಚೀಫ್ ಪ್ರೊಕ್ಟಾರ್ ಆಫೀಸ್ ಮ್ಯಾನುಯಲ್ ನಿಯಮಗಳನ್ನು ತೀವ್ರವಾಗಿ ಟೀಕಿಸಿರುವ ಬ್ರಿಟಾಸ್, ಈ ಕಠಿಣ ನಿಯಮಾವಳಿಗಳು ಪ್ರತಿಭಟನೆ ಮತ್ತು ವೈಚಾರಿಕ ಸಭೆಗಳ ಮೇಲೆ ಅತಿಯಾದ ದಂಡ ಮತ್ತು ವಿಪರೀತ ಶಿಸ್ತಿನ ಕ್ರಮಗಳನ್ನು ಹೇರಲು ಅವಕಾಶ ಮಾಡಿಕೊಡುತ್ತಿವೆ. ಇದು ಜೆಎನ್ಯುವಿನ ಪ್ರಜಾಸತ್ತಾತ್ಮಕ ಮತ್ತು ಸ್ವತಂತ್ರ ಅಭಿವ್ಯಕ್ತಿಯ ಪರಂಪರೆಗೆ ಆತಂಕಕಾರಿ ಬೆದರಿಕೆಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಆರೋಗ್ಯಕರ ವಾತಾವರಣವನ್ನು ಉಳಿಸಲು ಕೇಂದ್ರ ಸರ್ಕಾರ ಮತ್ತು ರಾಷ್ಟ್ರಪತಿಗಳು ತಕ್ಷಣ ಸ್ಪಂದಿಸಿ ಬಿಕ್ಕಟ್ಟನ್ನು ಶಮನಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸುಪ್ರೀಂಕೋರ್ಟ್ ವಶಕ್ಕೆ ಕೇಂದ್ರದ ಯತ್ನ: ಸಿಬಲ್ ಆರೋಪ

ನವದೆಹಲಿ, ಅ. 19: ಕೇಂದ್ರ ಸರ್ಕಾರವು ಮಾಧ್ಯಮ ಸೇರಿದಂತೆ ಹಲವು ಸಾಂವಿಧಾನಿಕ ಹಾಗೂ ಸಾಂಸ್ಥಿಕ ವ್ಯವಸ್ಥೆಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ಇದೀಗ ಸುಪ್ರೀಂ ಕೋರ್ಟನ್ನೂ ವಶಕ್ಕೆ ಪಡೆಯಲು ಪ್ರಯತ್ನಿಸುತ್ತಿದೆ. ಆದರೆ, ಇದು ಸಾಧ್ಯವಿಲ್ಲ ಎಂಬ ನಂಬಿಕೆ ತಮಗಿದೆ ಎಂದು ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿರುವುದು ಇದೀಗ ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮತ್ತು ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ಇತ್ತೀಚೆಗೆ ನಡೆದ ಪ್ರತಿಭಟನೆಗಳಿಗೆ ಸರ್ಕಾರ ಪ್ರತಿಕ್ರಿಯಿಸಿದ ರೀತಿಯ ಕುರಿತು ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಸಿಬಲ್ ಈ ಹೇಳಿಕೆ ನೀಡಿದ್ದಾರೆ.

2014ರಿಂದಲೂ ಕೇಂದ್ರ ಸರ್ಕಾರವು ವಿವಿಧ ಸಂಸ್ಥೆಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವ ಕಾರ್ಯತಂತ್ರ ಅನುಸರಿಸುತ್ತಿದೆ. ಜೊತೆಗೆ ಜನರ ಮತದಾನದ ಹಕ್ಕುಗಳನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ. ಮೊದಲು ಅವರು ಮಾಧ್ಯಮವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಮಾಧ್ಯಮವನ್ನು ವಶಕ್ಕೆ ಪಡೆದ ಬಳಿಕ ಇತರ ಸಂಸ್ಥೆಗಳ ಮೇಲೂ ನಿಯಂತ್ರಣ ಸಾಧಿಸಿದರು. ಈಗಲೂ ಸ್ವತಂತ್ರವಾಗಿ ಉಳಿದಿರುವ ಒಂದು ಸಂಸ್ಥೆಯೆಂದರೆ ಅದು ಭಾರತದ ಸುಪ್ರೀಂ ಕೋರ್ಟ್. ಅದನ್ನೂ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ, ಅದು ಸಾಧ್ಯವಾಗುವುದಿಲ್ಲ ಎಂಬ ಸಂಪೂರ್ಣ ನಂಬಿಕೆ ನನಗಿದೆ. ಬೇರೆ ಯಾವುದನ್ನೂ ವಶಕ್ಕೆ ಪಡೆಯಲು ಸಾಧ್ಯವಾಗದಿದ್ದರೆ, ಕನಿಷ್ಠ ಮತದಾರರ ಪಟ್ಟಿಯನ್ನಾದರೂ ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದು ಎಂದು ಅವರು ಯೋಚಿಸಿರಬಹುದು ಎಂದು ಸಿಬಲ್ ಹೇಳಿದರು.



2014ರಿಂದಲೂ ಸತತ ಯತ್ನ

2014ರಿಂದಲೂ ಹಲವು ಸಂಸ್ಥೆಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವುದೇ ಸರ್ಕಾರದ ನೀತಿಯಾಗಿದೆ. ಮೊದಲು ಮಾಧ್ಯಮವನ್ನು ವಶಕ್ಕೆ ಪಡೆದರು. ನಂತರ ವಿಶ್ವವಿದ್ಯಾಲಯಗಳು, ರಾಜ್ಯಪಾಲರು ಸೇರಿ ಇತರ ಹಲವು ಸಂಸ್ಥೆಗಳ ಮೇಲೂ ನಿಯಂತ್ರಣ ಸಾಧಿಸಿದರು. ಆದರೆ, ಭಾರತದ ಸುಪ್ರೀಂ ಕೋರ್ಟ್ ಮಾತ್ರ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ. ಸುಪ್ರೀಂ ಕೋರ್ಟ್ ಈ ಎಲ್ಲ ಬೆಳವಣಿಗೆಗಳನ್ನು ಪರಿಗಣಿಸಿ, ಜನರ ಹಕ್ಕುಗಳನ್ನು ರಕ್ಷಿಸಲಿದೆ ಎಂಬ ವಿಶ್ವಾಸ ತಮಗಿದೆ ಎಂದ ಅವರು, ಶಾಂತಿಯುತ ಪ್ರತಿಭಟನೆ ನಡೆಸುವ ನಾಗರಿಕರ ಸಂವಿಧಾನಬದ್ಧ ಹಕ್ಕುಗಳನ್ನು ನ್ಯಾಯಾಲಯ ಕಾಪಾಡಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಭಾರತದ ಸುಪ್ರೀಂ ಕೋರ್ಟ್ ಸಂವಿಧಾನ ನೀಡಿರುವ ಮೂಲಭೂತ ಹಕ್ಕು. ಸಾರ್ವಜನಿಕ ಸುವ್ಯವಸ್ಥೆಯಂತಹ ಸಂವಿಧಾನಬದ್ಧವಾಗಿ ಮಾನ್ಯವಾದ ಕಾರಣಗಳಿದ್ದಾಗ ಮಾತ್ರ ಕಾನೂನಿನ ಮಿತಿಯೊಳಗೆ ಇಂತಹ ಹಕ್ಕುಗಳಿಗೆ ನಿರ್ಬಂಧ ವಿಧಿಸಬಹುದು. ಅಧಿಕಾರಿಗಳು ಸೂಕ್ತ ಕಾರಣಗಳನ್ನು ನೀಡದೆ ಪ್ರತಿಭಟನೆಗಳನ್ನು ನಿರ್ಬಂಧಿಸುವಂತಿಲ್ಲ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್)ಯ ಸೆಕ್ಷನ್ 163ರ ಅಡಿಯಲ್ಲಿ ವಿಧಿಸಲಾಗಿರುವ ನಿಷೇಧಾಜ್ಞೆಗಳ ಬಗ್ಗೆಯೂ ಪ್ರಶ್ನೆಗಳಿವೆ. ಇಂತಹ ನಿರ್ಬಂಧಗಳು ಏಕೆ ಅಗತ್ಯವಾಗಿದ್ದವು ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಸಮರ್ಥಿಸಬೇಕು. ಈ ವಿಚಾರವನ್ನು ನಾವು ಸುಪ್ರೀಂ ಕೋರ್ಟ್‌ನಲ್ಲಿ ಚರ್ಚಿಸುತ್ತೇವೆ ಎಂದು ಹೇಳಿದರು.

ಕಾನೂನಿನ ಚೌಕಟ್ಟಿನಲ್ಲೇ ಕಾರ್ಯಾಂಗದ ಶಕ್ತಿಯನ್ನು ಕಟ್ಟಿಹಾಕಬಹುದು ಎಂಬ ವಿಶ್ವಾಸದ ಮೇಲೆ ಸಿಬಲ್ ಹೇಳಿರುವ ಮಾತುಗಳು ಮಹತ್ವ ಪಡೆದುಕೊಂಡಿವೆ. 1973ರ ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಂತೆ ನ್ಯಾಯಾಂಗದ ಸ್ವಾಯತ್ತತೆ ಮತ್ತು ಮುಕ್ತ–ನ್ಯಾಯಸಮ್ಮತ ಚುನಾವಣೆಗಳು ಭಾರತ ಸಂವಿಧಾನದ ಮೂಲ ರಚನೆಯ ಭಾಗವಾಗಿವೆ. ಸಂಸತ್ತು ಅಥವಾ ಕಾರ್ಯಾಂಗವು ಎಷ್ಟೇ ಶಕ್ತಿಶಾಲಿಯಾಗಿದ್ದರೂ, ಸಂವಿಧಾನದ ಈ ಮೂಲ ರಚನೆಯನ್ನು ಬದಲಾಯಿಸಲು ಅಥವಾ ನ್ಯಾಯಾಂಗದ ಸ್ವತಂತ್ರ ಅಧಿಕಾರವನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ. ಸಿಬಲ್ ಅವರ ಸುಪ್ರೀಂ ಕೋರ್ಟ್ ವಶಕ್ಕೆ ಪಡೆಯಲು ಸಾಧ್ಯವಿಲ್ಲ ಎಂಬ ನಂಬಿಕೆಗೆ ಇದೇ ಮುಖ್ಯ ಕಾನೂನಾತ್ಮಕ ಆಧಾರ.

ಸಿಆರ್‌ಪಿಸಿ ಸೆಕ್ಷನ್ 144 ರ ಬದಲಿಗೆ ಈಗ ಜಾರಿಗೆ ಬಂದಿರುವ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 163ರ ಅಡಿಯಲ್ಲಿ ನಿಷೇಧಾಜ್ಞೆ ವಿಧಿಸುವುದಕ್ಕೆ ಕಟ್ಟುನಿಟ್ಟಿನ ನಿಯಮಗಳಿವೆ. ಕೆಲವು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಈಗಾಗಲೇ ಸ್ಪಷ್ಟಪಡಿಸಿರುವಂತೆ ಶಾಂತಿಯುತ ಪ್ರತಿಭಟನೆಗಳನ್ನು ತಡೆಯಲು ಕೇವಲ ನೆಪಮಾತ್ರಕ್ಕೆ ನಿಷೇಧಾಜ್ಞೆ ಜಾರಿಗೊಳಿಸುವಂತಿಲ್ಲ. ಅಧಿಕಾರಿಗಳು ಸೂಕ್ತ ಮತ್ತು ನೈಜ ಸಾರ್ವಜನಿಕ ತುರ್ತುಸ್ಥಿತಿಯ ಕಾರಣಗಳನ್ನು ನೀಡಲೇಬೇಕು.

ಮತದಾರರ ಪಟ್ಟಿಯಿಂದ ಅರ್ಹ ನಾಗರಿಕರ ಹೆಸರುಗಳನ್ನು ತೆಗೆದುಹಾಕುವುದು ಅಥವಾ ಮತದಾರರ ಹಕ್ಕನ್ನು ಕಸಿದುಕೊಳ್ಳುವುದು ಸಂವಿಧಾನದ ವಿಧಿ 326 (ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು) ಕ್ಕೆ ವಿರುದ್ಧವಾಗಿದೆ. ಇದನ್ನು ನ್ಯಾಯಾಲಯದಲ್ಲಿ ಸವಾಲು ಮಾಡಲು ಗಟ್ಟಿ ಕಾನೂನಿನ ಆಧಾರವಿದೆ.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಅವರ ನಿರ್ಧಾರಗಳನ್ನು ಸಾರ್ವಜನಿಕ ವೇದಿಕೆಯಲ್ಲಿ ಪ್ರಶ್ನಿಸುವ ಮೂಲಕ, ಮುಂಬರುವ ಚುನಾವಣೆಗಳು ಹಾಗೂ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯು ಸಂಪೂರ್ಣ ಪಾರದರ್ಶಕವಾಗಿ ನಡೆಯುವಂತೆ ತನಿಖಾತ್ಮಕ ಒತ್ತಡ ಹೇರಲು ಕೂಡ ಸಿಬಲ್ ಅವರ ಮಾತುಗಳು ಆಧಾರವಾಗಲಿವೆ.

ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ ವಿದ್ಯಾರ್ಥಿ ನಾಯಕಿ ನೇಹಾ ಬೋರಾ

ನವದೆಹಲಿ, ಅ. 19: ಶಾಂತಿ ಸುವ್ಯವಸ್ಥೆ ಕಾಪಾಡುವ ನೆಪದಲ್ಲಿ 10,000 ಮೊತ್ತದ ಶಾಂತಿ ಮುಚ್ಚಳಿಕೆ ಮತ್ತು ಶ್ಯೂರಿಟಿ ನೀಡುವಂತೆ ದೆಹಲಿ ಪೋಲೀಸರು ನೀಡಿರುವ ನೋಟಿಸ್ ಅನ್ನು ಪ್ರಶ್ನಿಸಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷೆ, ವಿದ್ಯಾರ್ಥಿ ನಾಯಕಿ ನೇಹಾ ಬೋರಾ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ದೆಹಲಿ ಪೋಲೀಸರ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಹೊರಡಿಸಿರುವ ಈ ನೋಟಿಸ್ ಸಂವಿಧಾನ ಬಾಹಿರವಾಗಿದ್ದು, ಪ್ರಜಾಸತ್ತಾತ್ಮಕವಾಗಿ ಪ್ರತಿಭಟಿಸುವ ಹಕ್ಕನ್ನು ಹತ್ತಿಕ್ಕುವ ಉದ್ದೇಶವನ್ನು ಹೊಂದಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ. ಈ ಪ್ರಕರಣದ ತುರ್ತು ವಿಚಾರಣೆ ನಡೆಸುವಂತೆ ನೇಹಾ ಬೋರಾ ಅವರ ಪರ ವಕೀಲರ ತಂಡ ಹೈಕೋರ್ಟ್‌ಗೆ ಮನವಿ ಮಾಡಿದೆ.

ಏಕಪಕ್ಷೀಯ ನಿರ್ಧಾರ ಕೈಗೊಳ್ಳುವ ಮೂಲಕ ಚುನಾವಣಾ ಅಕ್ರಮಗಳನ್ನು ನಡೆಸಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ಆಗ್ರಹಿಸಿದ ದೇಶಾದ್ಯಂತ ಪ್ರತಿಭಟನೆ ನಡೆಯುತ್ತಿದೆ. ದೆಹಲಿಯ ಜಂತರ್ ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟಿಸಿದ ಹಲವು ಮಂದಿಯ ಬಂಧನವಾಗಿದೆ. ಸಿಜೆಪಿ ನಾಯಕರಾದ ಸೌರವ್ ದಾಸ್ ಮತ್ತು ಆಶುತೋಷ್ ರಾಂಕಾ ಅವರನ್ನೂ ಬಂಧಿಸಿ, ಶಾಂತಿ ಕಾಪಾಡುವುದಾಗಿ ಸಹಿ ಹಾಕಿಸಿ ಬಿಡುಗಡೆ ಮಾಡಲಾಗಿತ್ತು. ಅದರಂತೆ ಶಾಂತಿಯುತವಾಗಿಯೇ ತ್ರಿವರ್ಣ ಧ್ವಜ ಹಿಡಿದು ಪ್ರತಿಭಟಿಸಿದ ಈ ಇಬ್ಬರೂ ನಾಯಕರನ್ನು ಬಂಧಿಸಲಾಗಿದೆ, ಇನ್ನೂ ಬಿಡುಗಡೆ ಮಾಡಲಾಗಿಲ್ಲ.

ಇವೆಲ್ಲವುದರ ವಿರುದ್ಧವಾಗಿ ಇತ್ತೀಚೆಗೆ ಮಂಡಿ ಹೌಸ್ ಮತ್ತು ಕನ್ನಾಟ್ ಪ್ಲೇಸ್ ಭಾಗದಲ್ಲಿ ಲೆಹರಾ ದೊ ತಿರಂಗಾ ಮಾರ್ಚ್ ನಡೆಸಲಾಗಿದೆ. ಈ ಪ್ರತಿಭಟನೆಯ ಸಮಯದಲ್ಲಿ ದೆಹಲಿ ಪೋಲೀಸರು ನೇಹಾ ಬೋರಾ ಅವರನ್ನು ಕಸ್ಟಡಿಗೆ ತೆಗೆದುಕೊಂಡಿದ್ದರು. ದೆಹಲಿ ಪೋಲೀಸ್ ಕಾಯ್ದೆಯ ಸೆಕ್ಷನ್ 65ರ ಅಡಿಯಲ್ಲಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರ ಅವರನ್ನು ಮರುದಿನ ಬೆಳಿಗ್ಗೆ ಬಿಡುಗಡೆ ಮಾಡಲಾಗಿತ್ತು. ಆದಾಗ್ಯೂ, ತನಿಖೆ ಮತ್ತು ವಿಚಾರಣೆ ಮುಗಿಯುವವರೆಗೆ ಶಾಂತಿ ಕಾಪಾಡಲು ಸೆಕ್ಷನ್ 126ರ ಅಡಿಯಲ್ಲಿ ಮುಚ್ಚಳಿಕೆ ಪತ್ರಕ್ಕೆ ಸಹಿ ಹಾಕುವಂತೆ ಸೂಚಿಸಿ ಪೊಲೀಸರು ನೋಟಿಸ್ ಜಾರಿಗೊಳಿಸಿದ್ದರು. ತಮಗೆ ಕಿರುಕುಳ ನೀಡುವ ಉದ್ದೇಶದಿಂದಲೇ ಈ ನೋಟಿಸ್ ನೀಡಲಾಗಿದೆ ಎಂದು ಬೋರಾ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದ್ದಾರೆ.

ಮಣಿಪುರ: ಗುಂಡೇಟಿಗೆ 3 ಬಲಿ

ಮಣಿಪುರ, ಅ. 19: ಮಣಿಪುರದಲ್ಲಿ ಹಿಂಸಾಚಾರದ ಕೃತ್ಯ ಮುಂದುವರೆದಿದ್ದು, ಉಗ್ರರು ನಡೆಸಿದ ಗುಂಡಿನ ದಾಳಿಗೆ ಮೂವರು ಬಲಿಯಾಗಿದ್ದಾರೆ. ಈ ಹತ್ಯೆಯನ್ನು ಖಂಡಿಸಿ ಮತ್ತು ಸರ್ಕಾರದ ಭದ್ರತಾ ವೈಫಲ್ಯವನ್ನು ವಿರೋಧಿಸಿ ಆಕ್ರೋಶಿತಗೊಂಡ ಸ್ಥಳೀಯ ನಿವಾಸಿಗಳು, ಇಂಫಾಲದಲ್ಲಿರುವ ಮುಖ್ಯಮಂತ್ರಿಗಳ ಅಧಿಕೃತ ನಿವಾಸದ (ಬಂಗಲೆ) ಎದುರು ಮೃತರ ದೇಹಗಳನ್ನು ಇಟ್ಟು ತೀವ್ರ ಪ್ರತಿಭಟನೆ ನಡೆಸಿದ್ದಾರೆ.

ಮಣಿಪುರದ ಇಂಫಾಲ ಪೂರ್ವ ಜಿಲ್ಲೆಯ ಅರಣ್ಯ ಪ್ರದೇಶದ ಬಳಿ ವಿರಾಮದ ವೇಳೆ ಅಥವಾ ಊರುವಲು ಸಂಗ್ರಹಿಸಲು ತೆರಳಿದ್ದಾಗ ಸಂಶಯಾಸ್ಪದ ಉಗ್ರರು ಈ ಮೂವರು ಮೇಲೆ ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ. ಈ ಅನಿರೀಕ್ಷಿತ ದಾಳಿಯಲ್ಲಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತರ ಹತ್ಯೆಯಿಂದ ಆಕ್ರೋಶಿತರಾದ ನೂರಾರು ಸ್ಥಳೀಯರು ಮತ್ತು ಗುಂಪು ಸೇರಿದ್ದ ಪ್ರತಿಭಟನಾಕಾರರು, ಮೃತರ ಮೃತದೇಹಗಳನ್ನು ನೇರವಾಗಿ ಇಂಫಾಲದಲ್ಲಿರುವ ಮುಖ್ಯಮಂತ್ರಿಗಳ ಬಂಗಲೆಯ ಮುಖ್ಯದ್ವಾರದ ಬಳಿ ತಂದು ಪ್ರತಿಭಟನೆ ಆರಂಭಿಸಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಮತ್ತು ನಾಗರಿಕರಿಗೆ ಸೂಕ್ತ ರಕ್ಷಣೆ ಸಿಗುತ್ತಿಲ್ಲದಿರುವುದಕ್ಕೆ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಪರಿಸ್ಥಿತಿಯನ್ನು ನಿಯಂತ್ರಿಸಲು ಮತ್ತು ಗುಂಪನ್ನು ಚದುರಿಸಲು ಭದ್ರತಾ ಸಿಬ್ಬಂದಿ ಅಶ್ರುವಾಯು ಗೋಳುಗಳನ್ನು ಸಿಡಿಸಿರುವ ಬಗ್ಗೆಯೂ ವರದಿಯಾಗಿದೆ.

2023ರಿಂದಲೇ ಮಣಿಪುರದಲ್ಲಿ ಹಿಂಸಾಚಾರ ನಡೆಯುತ್ತಿದೆ. ಆರಂಭದಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯದ ನಡುವೆ ಹಿಂಸಾಚಾರ ನಡೆದಿದ್ದು, 280ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದಾರೆ. ಈ ವರ್ಷದಿಂದ ನಾಗಾ ಮತ್ತು ಕುಕಿ ಸಮುದಾಯದ ನಡುವೆ ಹಿಂಸಾಚಾರ ನಡೆಯುತ್ತಿದೆ. ಆಗಾಗೇ ಕೊಲೆಗಳಾಗುತ್ತಿವೆ.

ದಿ ಗ್ರೇಟ್ ಇಂಡಿಯಾ ಯೂನಿವರ್ಸಿಟಿ – ಕೆಐಐಟಿ ಭುವನೇಶ್ವರ್'

ಭುವನೇಶ್ವರ, ಅ.19: ಇಲ್ಲಿನ ಕಳಿಂಗ ಇನ್ಸ್‌ಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ವಿಶ್ವವಿದ್ಯಾಲಯದ ಸಾಧನೆ ಕುರಿತು ಡಿಸ್ಕವರಿ ವಾಹಿನಿಯು 'ದಿ ಗ್ರೇಟ್ ಇಂಡಿಯಾ ಯೂನಿವರ್ಸಿಟಿ – ಕೆಐಐಟಿ ಭುವನೇಶ್ವರ್' ಎಂಬ ಹೆಸರಿನಲ್ಲಿ ವಿಶೇಷ ಕಾರ್ಯಕ್ರಮ ಪ್ರಸಾರ ಮಾಡಿದೆ.

ಭಾರತದ ಅತ್ಯಂತ ಪ್ರಭಾವಶಾಲಿ ಶಿಕ್ಷಣ ಸಂಸ್ಥೆಯಲ್ಲಿ ಏನೆಲ್ಲ ಸೌಲಭ್ಯಗಳಿರಬೇಕು, ಯುವಕರ ಮನಸ್ಸನ್ನು ಸಬಲೀಕರಣಗೊಳಿಸುವುದರಿಂದ ಹಿಡಿದು ಭವಿಷ್ಯದ ಬದಲಾವಣೆಗೆ ಅವರನ್ನು ರೂಪಿಸುವವರೆಗೆ ಇರಬೇಕಾದ ದೂರದೃಷ್ಟಿ, ದೃಢನಿಶ್ಚಯ ಮತ್ತು ಪರಿವರ್ತನೆಯ ಕಥೆ ಎಂಬ ವಿವರದೊಂದಿಗೆ ಕಾರ್ಯಕ್ರಮದಲ್ಲಿ ವಿವರಿಸಲಾಗಿದೆ. ಟೈಮ್ಸ್ ಹ

ಮಕ್ಕಳನ್ನು ಹೊಡೆಯುವ ಸರಕಾರವನ್ನು ಮತದಾನದ ಮೂಲಕವೇ ಕೆಳಗಿಳಿಸುತ್ತೇವೆ: ನಟ ಪ್ರಕಾಶ್ ರಾಜ್

ಬೆಂಗಳೂರು, ಅ.19: ಮಕ್ಕಳನ್ನು ಹೊಡೆಯುವ ಸರಕಾರವನ್ನು ಕೆಳಗಿಳಿಸುವುದು ಪ್ರಜೆಗಳ ಜವಾಬ್ದಾರಿ. ರೈತರನ್ನು ಹೊಡೆಯುವ ಸರಕಾರವನ್ನೂ ಬದಲಿಸಬೇಕು. ಆದರೆ ಇದನ್ನು ಶಾಂತಿಯುತವಾಗಿ, ಪ್ರಜಾಪ್ರಭುತ್ವದ ಮಾರ್ಗದಲ್ಲಿ ಸಂವಿಧಾನ ನೀಡಿರುವ ಮತದಾನದ ಹಕ್ಕಿನ ಮೂಲಕವೇ ಮಾಡುತ್ತೇವೆ ಎಂದು ನಟ ಪ್ರಕಾಶ್ ರಾಜ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರು, ದಲಿತರು, ವಿದ್ಯಾರ್ಥಿಗಳು ಮತ್ತು ಯುವಕರು ಬೀದಿಗಿಳಿದಿದ್ದಾರೆ. ಇಡೀ ದೇಶವನ್ನೇ ಜಂತರ್ ಮಂತರ್ ಮಾಡುತ್ತೇವೆ. ಅ.23ರಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ರೈತರು ಮತ್ತು ದಲಿತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಹೋರಾಟ ತೀವ್ರಗೊಳ್ಳಲಿದೆ. ಎಷ್ಟೇ ಪೊಲೀಸರು ಮತ್ತು ಸೈನಿಕರನ್ನು ನಿಯೋಜಿಸಿದರೂ ಜನರ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎಂದರು. ಎಸ್ಐಆರ್ ಪ್ರಕ್ರಿಯೆ, ಚುನಾವಣಾ ಆಯೋಗದ ಕಾರ್ಯವೈಖರಿ ಹಾಗೂ ಪ್ರತಿಭಟನಾಕಾರರ ಮೇಲಿನ ಪೊಲೀಸ್ ಕ್ರಮಗಳನ್ನು ಖಂಡಿಸಿ, ದಿಲ್ಲಿಯಲ್ಲಿ ಶಾಂತಿಯುತ ಪ್ರತಿಭಟನಾಕಾರರ ಮೇಲೆ ಬಲಪ್ರಯೋಗ ನಡೆಸಲಾಗಿದೆ. ಪತ್ರಕರ್ತರ ಮೇಲೆ ಹಲ್ಲೆ ಮಾಡಿ ಕ್ಯಾಮೆರಾಗಳನ್ನು ಕಿತ್ತುಕೊಳ್ಳಲಾಗಿದೆ. ಇದು ಪ್ರಜಾಪ್ರಭುತ್ವ ಮತ್ತು ಪತ್ರಿಕಾ ಸ್ವಾತಂತ್ರ್ಯದ ಮೇಲಿನ ದಾಳಿ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಕಾರ್ಯವೈಖರಿ ಹಾಗೂ ಎಸ್ಐಆರ್ ಪ್ರಕ್ರಿಯೆಯನ್ನು ಜನರು ಪ್ರಶ್ನಿಸುವ ಹಕ್ಕನ್ನು ಹೊಂದಿದ್ದಾರೆ. ಚುನಾವಣಾ ಆಯೋಗವು ಜನರಿಗೆ ಉತ್ತರದಾಯಿಯಾಗಿರಬೇಕು ಎಂದು ಅವರು ತಿಳಿಸಿದರು.

ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸಿದ ಹೋರಾಟವನ್ನು ಉಲ್ಲೇಖಿಸಿದ ಅವರು, ರೈತರು ಮತ್ತು ದಲಿತ ಸಂಘಟನೆಗಳ ಒಗ್ಗಟ್ಟು ಜನಶಕ್ತಿಯನ್ನು ಹೆಚ್ಚಿಸಲಿದೆ. ಅಂಬೇಡ್ಕರ್ರ ಸಂವಿಧಾನ ಮತ್ತು ಗಾಂಧೀಜಿಯವರ ಸತ್ಯಾಗ್ರಹ ನಮ್ಮ ಶಕ್ತಿ. ಜನರ ಹಕ್ಕುಗಳನ್ನು ಹತ್ತಿಕ್ಕುವ ಸರಕಾರವನ್ನು ಬದಲಿಸುವ ಜವಾಬ್ದಾರಿ ಪ್ರಜೆಗಳ ಮೇಲಿದೆ. ನಾವು ಹೆದರುವುದಿಲ್ಲ; ಮತದಾನದ ಮೂಲಕವೇ ರಾಜಕೀಯ ಬದಲಾವಣೆ ತರುತ್ತೇವೆ ಎಂದು ಪ್ರಕಾಶ್ ರಾಜ್ ಹೇಳಿದರು.

ರಾಜ್ಯ ರೈತ ಸಂಘಟನೆಯ ರಾಜ್ಯಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಎಸ್ಐಆರ್ ಪ್ರಕ್ರಿಯೆಯನ್ನು ರದ್ದುಪಡಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅ.23ರಂದು ನಡೆಯುತ್ತಿರುವ ಹೋರಾಟಕ್ಕೆ ರೈತ ಮತ್ತು ದಲಿತ ಸಂಘಟನೆಗಳು ಬೆಂಬಲ ಘೋಷಿಸಿವೆ. ಕೇಂದ್ರ ಸರಕಾರವು ಚುನಾವಣಾ ಆಯೋಗದ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡುತ್ತಿದೆ. ರೈತರ ಹಿತಾಸಕ್ತಿಯನ್ನು ಕಡೆಗಣಿಸಿರುವ ಕೇಂದ್ರ ಸರಕಾರ, ಕೃಷಿ ಕಾಯ್ದೆಗಳ ವಿರುದ್ಧದ ಐತಿಹಾಸಿಕ ಹೋರಾಟದ ಬಳಿಕ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ. ರಾಜ್ಯದಲ್ಲಿ ನಡೆಯುತ್ತಿರುವ ಕಬ್ಬು ಬೆಳೆಗಾರರ ಹೋರಾಟದ ಬಿಕ್ಕಟ್ಟಿಗೂ ಕೇಂದ್ರ ಸರಕಾರದ ನಿರ್ಲಕ್ಷ್ಯವೇ ಪ್ರಮುಖ ಕಾರಣ ಎಂದು ಆರೋಪಿಸಿದರು. ದಸಂಸ ಹೋರಾಟಗಾರ ಗುರುಪ್ರಸಾದ್ ಕೆರಗೋಡು ಮಾತನಾಡಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ರನ್ನು ವಜಾಗೊಳಿಸಿ ನ್ಯಾಯಾಂಗ ವಿಚಾರಣೆಗೆ ಒಳಪಡಿಸಬೇಕು. ಚುನಾವಣಾ ಆಯುಕ್ತರ ನೇಮಕ ಪ್ರಕ್ರಿಯೆಯನ್ನು ಪ್ರಜಾಸತ್ತಾತ್ಮಕ ಗೊಳಿಸಬೇಕು. ಎಸ್ಐಆರ್ ಅನ್ನು ಸಂಪೂರ್ಣ ರದ್ದುಗೊಳಿಸಿ, ಹೊಸ ಚುನಾವಣಾ ಆಯೋಗದ ನೇತೃತ್ವದಲ್ಲಿ ಜನಸ್ನೇಹಿ ರೀತಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಸಬೇಕು. ಎಸ್ಐಆರ್ ಬಳಿಕ ನಡೆದಿರುವ ಎಲ್ಲ ಚುನಾವಣೆಗಳನ್ನು ರದ್ದುಗೊಳಿಸಿ ಮರುಚುನಾವಣೆ ನಡೆಸಬೇಕು. ಜಂತರ್ ಮಂತರ್ನಲ್ಲಿ ಪ್ರತಿಭಟನೆಗೆ ಅವಕಾಶ ಕಲ್ಪಿಸಿ, ಯುವಜನರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ರೈತ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ, ಟಿ.ಯಶವಂತ್, ಶಿವಪ್ರಕಾಶ್, ಕುಮಾರ್ ಸಮತಳ ಹಾಗೂ ದಲಿತ ಮುಖಂಡರಾದ ಇಂದುಧರ ಹೊನ್ನಾಪುರ, ಎನ್.ವೆಂಕಟೇಶ್, ವಿ.ನಾಗರಾಜ್, ಬಸವರಾಜ್ ಕೌತಾಳ್, ಕರಿಯಪ್ಪ ಗುಡಿಮನಿ ಉಪಸ್ಥಿತರಿದ್ದರು.

ಸ್ಟಿಂಗ್ ಸೂತ್ರಧಾರಿಗಳ ಬಂಧನಕ್ಕೆ ಆಗ್ರಹಿಸಿ ವಿಜಯದಶಮಿ ಬಳಿಕ ಹೋರಾಟ: ಎಚ್ಡಿಕೆ

ಬೆಂಗಳೂರು, ಅ.19: ಸ್ಟಿಂಗ್ ಆಪರೇಷನ್ ಮಾಡಿದ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ನಡೆಸುತ್ತಿರುವ ಹೋರಾಟವನ್ನು ವಿಜಯ ದಶಮಿ ಹಬ್ಬದ ಬಳಿಕ ರಾಜ್ಯಾದ್ಯಂತ ತೀವ್ರಗೊಳಿಸಲು ಜೆಡಿಎಸ್ ಸಜ್ಜಾಗಿದೆ. ಕಳೆದ ಒಂದು ವಾರದಿಂದಲೂ ಸ್ಟಿಂಗ್ ಆಪರೇಷನ್ ಮಾಡಿದ ವ್ಯಕ್ತಿ ಹಾಗೂ ಅದರ ಹಿಂದಿರುವ ಸೂತ್ರಧಾರಿಯನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕೇಂದ್ರ ಸಚಿವ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೋರಾಟ ನಡೆಸುತ್ತಿದ್ದಾರೆ.

ಸ್ಟಿಂಗ್ ಆಪರೇಷನ್ ವಿಚಾರದ ಬಗ್ಗೆ ಕುಮಾರಸ್ವಾಮಿ ಅವರು ಆರೋಪ ಮಾಡಿದ ಬೆನ್ನಲ್ಲೆ ಜೆಡಿಎಸ್ ಸಮಾಜಿಕ ಜಾಲತಾಣದ ಸಿಬ್ಬಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಇದರಿಂದ ಆಕ್ರೋಶಗೊಂಡಿದ್ದ ಕುಮಾರಸ್ವಾಮಿ ಅವರು ನಗರ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿದ್ದಲ್ಲದೆ, ಆಯುಕ್ತರ ಕಚೇರಿಯಲ್ಲಿ ಪಕ್ಷದ ಶಾಸಕರು ಹಾಗೂ ಮುಖಂಡರೊಂದಿಗೆ ಕೆಲ ಕಾಲ ಧರಣಿ ನಡೆಸಿ ಎರಡು ದಿನಗಳ ಗಡುವು ನೀಡಿದ್ದರು.

ಗಡುವು ಮುಗಿದರೂ ಸ್ಟಿಂಗ್ ಆಪರೇಷನ್ ಆರೋಪಿಗಳನ್ನು ಬಂಧಿಸಿ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಲು ರಾಜ್ಯ ಸರ್ಕಾರ ಆದೇಶ ಮಾಡಿಲ್ಲ ಎಂದು ಆಕ್ರೋಶಗೊಂಡ ಶನಿವಾರ ಜೆಡಿಎಸ್ ಕೇಂದ್ರ ಕಚೇರಿ ಜೆ.ಪಿ.ಭವನದಿಂದ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿವರೆಗೆ ಪಕ್ಷದ ಶಾಸಕರು ಹಾಗೂ ಮುಖಂಡರೊಂದಿಗೆ ಪಾದಯಾತ್ರೆ ನಡೆಸಿದ್ದರು. ಅಲ್ಲದೆ, ಆರೋಪಿಯೇ ಸ್ಟಿಂಗ್ ಆಪರೇಷನ್ ಮಾಡಿರುವುದನ್ನು ಒಪ್ಪಿಕೊಂಡಿರುವಾಗ ಬೇರೆ ಯಾವ ಸಾಕ್ಷಿ ಬೇಕು ಎಂದು ಪ್ರಶ್ನಿಸಿದರು. ಜೊತೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮನವಿ ಪತ್ರವನ್ನು ಸಲ್ಲಿಸಿದ್ದರು.

ಬಿಎಂಐಸಿ ಅಕ್ರಮ, ಬಿಡಿದಿ ಉಪ ನಗರ ಯೋಜನೆ ವಿರುದ್ಧ ಹೋರಾಟ ಮಾಡುತ್ತಿರುವುದನ್ನು ಡೈವರ್ಟ್ ಮಾಡಲು ರಾಜ್ಯ ಸರ್ಕಾರವು ಸ್ಟಿಂಗ್ ಆಪರೇಷನ್ ವಿಚಾರ ಪ್ರಸ್ತಾಪಿಸಿ ಜನರನ್ನು ದಾರಿ ತಪ್ಪಿಸುತ್ತಿದೆ ಎಂದು ಕುಮಾರಸ್ವಾಮಿ ಅವರು ನಿರಂತರವಾಗಿ ಆರೋಪಿಸುತ್ತಾ ಬಂದಿದ್ದಾರೆ. ಅಲ್ಲದೆ, ಈ ಹೋರಾಟವನ್ನು ತಾರ್ಕಿಕ ಅಂತ್ಯ ಕೈಗೊಳ್ಳುವುದಾಗಿ ಹೇಳುತ್ತಿದ್ದಾರೆ.

ವಿಜಯ ದಶಮಿ ಹಬ್ಬ ಮುಗಿಯುವುದರೊಳಗೆ ರಾಜ್ಯ ಸರ್ಕಾರ ಕಾನೂನು ರೀತಿ ಕ್ರಮ ಕೈಗೊಳ್ಳದಿದ್ದರೆ, ಸ್ಟಿಂಗ್ ಆಪರೇಷನ್ ಹೋರಾಟ ತೀವ್ರಗೊಳಿಸಿ ರಾಜ್ಯಾದ್ಯಂತ ನಡೆಲು ತೀರ್ಮಾನಿಸಿದ್ದಾರೆ. ಶನಿವಾರ ಹೋರಾಟದ ರೂಪು ರೇಷೆಗಳ ಬಗ್ಗೆ ಪಕ್ಷದ ಶಾಸಕರು ಹಾಗೂ ಮುಖಂಡರೊಂದಿಗೆ ಸಮಾಲೋಚನೆ ನಡೆಸಿದ್ದಾರೆ.

ಕೆಪಿಎಸ್ಸಿ ನೇಮಕಾತಿ ಹಗರಣ ಆರೋಪಿಗಳಿಂದ ಕೋಟ್ಯಂತರ ರೂ.ಅವ್ಯವಹಾರ: ತನಿಖೆಯಲ್ಲಿ ಬಹಿರಂಗ

ಬೆಂಗಳೂರು, ಅ.19: ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಪರೀಕ್ಷಾ ಹಗರಣದ ತನಿಖೆ ದಿನದಿಂದ ದಿನಕ್ಕೆ ಚುರುಕುಗೊಳ್ಳುತ್ತಿದ್ದು, ವಿಚಾರಣೆ ವೇಳೆ ಬೆಚ್ಚಿಬೀಳಿಸುವ ಸಂಗತಿಗಳು ಹೊರಬರುತ್ತಿವೆ. ಪ್ರಶ್ನೆಪತ್ರಿಕೆ ಸೋರಿಕೆ ಜಾಲದ ಕಿಂಗ್ಪಿನ್ಗಳಾದ ಜ್ಞಾನೇಂದ್ರ ಕುಮಾರ್ ಹಾಗೂ ಬಸವರಾಜ್ ಕನ್ನಾಳೆ ನಡೆಸಿರುವ ಕೋಟ್ಯಂತರ ರೂಪಾಯಿಗಳ ಅವ್ಯವಹಾರ ಮತ್ತು ಸಾಕ್ಷ್ಯನಾಶದ ಕೃತ್ಯಗಳು ತನಿಖೆಯಲ್ಲಿ ಪತ್ತೆಯಾಗಿವೆ.

ಆರಂಭಿಕ ಡೀಲ್ ಪ್ರಕಾರ, ಪ್ರಶ್ನೆಪತ್ರಿಕೆಯನ್ನು ಕೇವಲ ಒಬ್ಬರು ಅಥವಾ ಇಬ್ಬರಿಗೆ ಮಾತ್ರ ನೀಡುವುದಾಗಿ ಬಸವರಾಜ್ ಕನ್ನಾಳೆ ಜ್ಞಾನೇಂದ್ರ ಕುಮಾರ್ಗೆ ಭರವಸೆ ನೀಡಿದ್ದ. ಆದರೆ, ಹೆಚ್ಚಿನ ಹಣದ ದುರಾಶೆಗೆ ಬಿದ್ದ ಕನ್ನಾಳೆ ಆ ನಿಯಮವನ್ನು ಮುರಿದು ಸುಮಾರು 10ಕ್ಕೂ ಹೆಚ್ಚು ಆಕಾಂಕ್ಷಿಗಳಿಗೆ ಪ್ರಶ್ನೆಪತ್ರಿಕೆ ಮಾರಾಟ ಮಾಡಿರುವುದು ತನಿಖೆಯಲ್ಲಿ ದೃಢಪಟ್ಟಿದೆ.

ಪ್ರಶ್ನೆಪತ್ರಿಕೆ ಸೋರಿಕೆಯ ಈ ಕೃತ್ಯಕ್ಕಾಗಿ ಜ್ಞಾನೇಂದ್ರ ಕುಮಾರ್ ಕನ್ನಾಳೆಯಿಂದ 1.3 ಕೋಟಿ ರೂಪಾಯಿ ನಗದನ್ನು ಪಡೆದುಕೊಂಡಿದ್ದ. ಅಕ್ರಮವಾಗಿ ಬಂದ ಈ ಹಣದಲ್ಲಿ ಜ್ಞಾನೇಂದ್ರ 23 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ಖರೀದಿಸಿದ್ದಾನೆ. ಅಷ್ಟೇ ಅಲ್ಲದೆ, ತನ್ನ ಕುಟುಂಬದ ಇಬ್ಬರು ಸದಸ್ಯರ ಖಾತೆಗಳಿಗೆ 25 ಲಕ್ಷ ರೂ.ಗಳನ್ನು ನೇರವಾಗಿ ವರ್ಗಾವಣೆ ಮಾಡಿದ್ದ ವಿಚಾರವೂ ಬ್ಯಾಂಕ್ ವಹಿವಾಟುಗಳ ಪರಿಶೀಲನೆ ವೇಳೆ ಬೆಳಕಿಗೆ ಬಂದಿದೆ.

ಸಾಕ್ಷ್ಯನಾಶಕ್ಕೆ ಯತ್ನ

ಪ್ರಶ್ನೆಪತ್ರಿಕೆ ಸೋರಿಕೆ ಮಾಡಲು ಜ್ಞಾನೇಂದ್ರ ಅತ್ಯಂತ ಯೋಜಿತ ಸಂಚು ರೂಪಿಸಿದ್ದ. ತನ್ನ ಅಧಿಕೃತ ಕಚೇರಿಯಲ್ಲೇ ಪ್ರಶ್ನೆಪತ್ರಿಕೆ ಹಾಗೂ ಅದಕ್ಕೆ ಸಂಬಂಧಿಸಿದ ಅಧಿಕೃತ ಕೀ ಉತ್ತರಗಳನ್ನು ಟ್ಯಾಬ್ ಒಂದರಲ್ಲಿ ದಾಖಲಿಸಿಕೊಂಡಿದ್ದ. ನಂತರ ಪರೀಕ್ಷೆಯ ಹಿಂದಿನ ದಿನ, ಅಂದರೆ ಜನವರಿ 7ರಂದು ಆ ರಹಸ್ಯ ದತ್ತಾಂಶವನ್ನು ಪೆನ್ಡ್ರೈವ್ಗೆ ವರ್ಗಾಯಿಸಿ (ಕಾಪಿ ಮಾಡಿ) ಬಸವರಾಜ್ ಕನ್ನಾಳೆಗೆ ಹಸ್ತಾಂತರಿಸಿದ್ದ. ಕೃತ್ಯ ಮುಗಿದ ಬೆನ್ನಲ್ಲೇ, ಯಾವುದೇ ಡಿಜಿಟಲ್ ಪುರಾವೆ ಸಿಗದಂತೆ ಮಾಡಲು ಪ್ರಶ್ನೆಪತ್ರಿಕೆ ದಾಖಲಿಸಿಕೊಂಡಿದ್ದ ಮೂಲ ಟ್ಯಾಬ್ ನೆಲಕ್ಕೆ ಅಪ್ಪಳಿಸಿ ಒಡೆದು ಹಾಕಿ ನಾಶಪಡಿಸಲಾಗಿತ್ತು ಎಂಬ ಆಘಾತಕಾರಿ ಸತ್ಯ ತನಿಖೆ ವೇಳೆ ಬಯಲಾಗಿದೆ.

ನನ್ನ ವಿರುದ್ಧದ ಆರೋಪ ಶುದ್ಧ ಸುಳ್ಳು: ಅನಿತಾ ಕುಮಾರಸ್ವಾಮಿ

ಬೆಂಗಳೂರು, ಅ.19: ನನ್ನ ವಿರುದ್ಧದ ಚಾರಿತ್ರ್ಯವಧೆ ಹಾಗೂ ಕಲ್ಪಿತ ಸಂಚಿನ ಹಿಂದೆ ಇರುವ ಸೂತ್ರಧಾರರಿಗೂ ಮತ್ತು ಅದನ್ನು ಕಾರ್ಯರೂಪಕ್ಕೆ ತಂದವರಿಗೂ ಆ ಜಗನ್ಮಾತೆ ದುರ್ಗಾ ದೇವಿಯೇ ತಕ್ಕಶಾಸ್ತಿ ಮಾಡಲಿದ್ದಾಳೆ. ಈ ಅಧರ್ಮಕ್ಕೆ ತಾಯಿ ದುರ್ಗೆಯ ದಂಡನೆಯೇ ಅಂತಿಮ ಉತ್ತರ ಎಂದು ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ ಹೇಳಿದ್ದಾರೆ.

ಪವಿತ್ರ ನವರಾತ್ರಿಯ ದಿವ್ಯ ದಿನಗಳಲ್ಲಿ ಖಾಸಗಿ ಸುದ್ದಿ ವಾಹಿನಿಯೊಂದರ ಮುಖ್ಯಸ್ಥರು ನನ್ನ ವಿರುದ್ಧ ಮಾಡಿರುವ ಆರೋಪಗಳು ಸಂಪೂರ್ಣ ಸತ್ಯಕ್ಕೆ ದೂರವಾದದ್ದು, ಸಂಪೂರ್ಣ ಕಟ್ಟುಕಥೆ ಮತ್ತು ದುರುದ್ದೇಶಪೂರಿತ ಸೃಷ್ಟಿ ಎಂದಿದ್ದಾರೆ. ಈ ಕುರಿತು ಸರಣಿ ಪೋಸ್ಟ್ ಮಾಡಿರುವ ಅವರು, ಖಾಸಗಿ ಸುದ್ದಿವಾಹಿನಿ ಮಾಲೀಕರು ಮಾಡಿರುವ ಆರೋಪವನ್ನು ಪ್ರಸ್ತಾಪಿಸದೇ ತಮ್ಮನ್ನು ಸಮರ್ಥಿಸಿಕೊಂಡಿದ್ದಾರೆ. ಸುದೀರ್ಘ ಕಾಲದಿಂದ ಸಾರ್ವಜನಿಕ ಜೀವನದಲ್ಲಿರುವ ನನ್ನ ಕಳಂಕರಹಿತ ಚಾರಿತ್ರ್ಯಕ್ಕೆ ಧಕ್ಕೆ ತರಲು ಧರ್ಮ ಮತ್ತು ಸತ್ಯದ ಹಬ್ಬವಾದ ನವರಾತ್ರಿಯ ಸಂದರ್ಭದಲ್ಲೇ ಇಂತಹ ತೀರಾ ಕೀಳುಮಟ್ಟದ, ದುರುದ್ದೇಶ ಪ್ರೇರಿತ ನಿಂದನೆಗಿಳಿದಿರುವುದಕ್ಕೆ ನನ್ನ ತೀವ್ರ ಧಿಕ್ಕಾರವಿದೆ. ಸತ್ಯವನ್ನು ಎಂದಿಗೂ ಮುಚ್ಚಿಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಸ್ಟಿಂಗ್ ಬೈಪಾಸ್ ಸರ್ಜರಿಯಂತಾಗಿದೆ, ಯಾರಿಗೂ ಪೂರ್ಣ ಮಾಹಿತಿಯಿಲ್ಲ: ಸತೀಶ್ ಜಾರಕಿಹೊಳಿ

ಗದಗ, ಅ.19: ಸ್ಟಿಂಗ್ ಆಪರೇಷನ್ ಎಂಬುದು ಬೈಪಾಸ್ ಸರ್ಜರಿಯಂತಾಗಿದೆ. ಯಾಕೆ, ಯಾವಾಗ, ಏನಾಯಿತು ಎಂದು ಯಾರಿಗೂ ಪೂರ್ಣ ಮಾಹಿತಿ ಇಲ್ಲ. ಈ ಬಗ್ಗೆ ಹೇಳುವ ಪರಿಸ್ಥಿತಿಯಲ್ಲಿ ಯಾರೂ ಇಲ್ಲ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು. ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಕುರಿತು ಹೇಳಿಕೆ ನೀಡುವುದರಿಂದ ದೂರ ಇರಲು ಬಯಸುವೆ. ಸದ್ಯ ತನಿಖೆ ನಡೆಯುತ್ತಿದೆ. ವರದಿ ಸಲ್ಲಿಕೆಯಾದ ನಂತರ ಸರ್ಕಾರವೇ ಸಾರ್ವಜನಿಕವಾಗಿ ಮಾಹಿತಿ ನೀಡಲಿದೆ ಎಂದರು.

ಕಬ್ಬು ಹೋರಾಟ: ಕೇಂದ್ರದ ಅಂಗಳದಲ್ಲಿ ಚೆಂಡು

ಕಬ್ಬು ಬೆಳೆಗಾರರ ಹೋರಾಟದ ಕುರಿತು ಪ್ರತಿಕ್ರಿಯಿಸಿದ ಅವರು, ಬಾಲ್ ಮತ್ತು ಬ್ಯಾಟ್ ಕೇಂದ್ರ ಸರ್ಕಾರದ ಬಳಿ ಇದೆ. ಹಾಗಾಗಿ, ಕೇಂದ್ರವೇ ಈ ಬಗ್ಗೆ ತೀರ್ಮಾನ ಕೈಗೊಳ್ಳಬೇಕು. ಬೆಂಬಲ ಬೆಲೆ ಹೆಚ್ಚಿಸಿದರೆ ರೈತರೊಂದಿಗೆ ಸಕ್ಕರೆ ಕಾರ್ಖಾನೆಗಳಿಗೂ ಅನುಕೂಲವಾಗಲಿದೆ. ಏಳು ವರ್ಷದಿಂದ ಸಕ್ಕರೆ ದರ ಹೆಚ್ಚಿಸಿಲ್ಲ. ಆದರೆ, ಪ್ರತಿವರ್ಷ ಕಬ್ಬಿನ ದರ ಹೆಚ್ಚಿಸುವುದರಿಂದ ಅಸಮತೋಲನ ಉಂಟಾಗಿದೆ. ಇದರಿಂದ ಕಾರ್ಖಾನೆಗಳಿಗೆ ತೊಂದರೆ ಎದುರಾಗಿದೆ. ಇದನ್ನೆಲ್ಲ ಪರಿಹರಿಸುವ ಶಕ್ತಿ ಕೇಂದ್ರ ಸರ್ಕಾರಕ್ಕಿದ್ದು, ಶೀಘ್ರ ಕ್ರಮ ಕೈಗೊಂಡರೆ ಕಬ್ಬು ಬೆಳೆಗಾರರ ಧರಣಿ ಅಂತ್ಯವಾಗಬಹುದು ಎಂದು ಹೇಳಿದರು.

ರೇಷ್ಮೆಕೃಷಿ ಜಂಟಿ ನಿರ್ದೇಶಕರ ಕಚೇರಿಯಲ್ಲಿ ದಸರಾ ಪೂಜೆ

ಬೆಂಗಳೂರು,ಅ.19: ಜೆಸಿ ರಸ್ತೆಯ ಮೈಶುಗರ್ ಕಟ್ಟಡದಲ್ಲಿರುವ ರೇಷ್ಮೆಕೃಷಿ ಜಂಟಿ ನಿರ್ದೇಶಕರ ಕಚೇರಿಯ ವಿಭಾಗದಲ್ಲಿ ಸರಳವಾಗಿ ದಸರ ಹಬ್ಬದ ಪೂಜೆಯನ್ನು ಮಾಡಲಾಯಿತು. (ರೇಷ್ಮೆ ಕೃಷಿ)ಇಲಾಖೆಯ ಜಂಟಿ ನಿರ್ದೇಶಕರಾದ ಕೆ ಎನ್ ರವಿ ಅವರು ಕಳೆದ ಒಂದು ತಿಂಗಳ ಹಿಂದೆ ವರ್ಗವಾಗಿದ್ದು ಇಲಾಖೆಯನ್ನು ಉತ್ತಮದತ್ತ ಕೊಂಡೊಯ್ಯಲು ಎಲ್ಲಾರೀತಿಯ ಸಹಕಾರ ನೀಡಲಾಗುತ್ತದೆ ಎಂದರು.

ಕೃಷಿಯಲ್ಲಿ ಕೆಲಸ ಮಾಡಯವ ರೈತಾಪಿ ವರ್ಗದವರಿಗೆ ಉತ್ತಮ ಮಳೆ,ಬೆಳೆಯಾಗಿ, ಅನ್ನದಾತರ ಸಂಕಷ್ಟ ದೂರವಾಗಲಿ, ವಿವಿಧ ಯೋಜನೆಗಳನ್ನು ರೈತರಿಗೆ ತಲುಪಿಸುವ ಕೆಲಸ ಮಾಡಲಾಗುತ್ತದೆ. ರೇಷ್ಮೆ ಬೆಳೆಯುವ ರೈತರು ಹೆಚ್ಚಾಗುತ್ತಿದ್ದು, ರೇಷ್ಮೆ ಬೆಳೆಗೆ ಉತ್ತಮ ಬೆಂಬಲ ಬೆಲೆ ನೀಡಲಾಗುತ್ತಿದೆ, ರೈತರ ಜೀವನ ಹಸನಾಗಲಿ ಎಂದು ಶುಭಹಾರೈಸಿದರು.

ರೇಷ್ಮೆಕೃಷಿ ವಿಭಾಗದ (ರೇಷ್ಮೆ ಕೃಷಿ)ಯ ಜಂಟಿ ನಿರ್ದೇಶಕರಾದ ಇಂದ್ರಾಣಿ ಮಾತನಾಡಿ, ರಾಜ್ಯದಲ್ಲಿ ಮಳೆ ಬೆಳೆ ಕೊರತೆಯಿದ್ದು, ರೈತರಿಗೆ ಶುಭವಾಗಲಿ, ಅವರ ಬೆಳೆಗಳಿಗೆ ಉತ್ತಮ ಬೆಂಬಲ ನೀಡಲಿ. ಅದರಲ್ಲಿಯೂ ರೇಷ್ಮೆಬೆಳೆ ರಾಜ್ಯದಲ್ಲಿ ಉತ್ತಮವಾಗಿ ಬರುತ್ತಿದ್ದು, ಅವರ ಸಂಕಷ್ಟಗಳಿಗೆ ಇಲಾಖೆಯು ಸದಾ ನೆರವಾಗುತ್ತದೆ ಎಂದರು. ಇನ್ನು ದಸರಾ ಪೂಜಾ ಕಾರ್ಯಕ್ರಮದಲ್ಲಿ ಚೇತನ್ , ಮಾಲ್ತೇಶ್, ಸೇರಿದಂತೆ ಸಹಾಯಕ ಅಧಿಕಾರಿಗಳು, ಪ್ರಭಾರಿಗಳು, ಸೇರಿದಂತೆ ಇಲಾಖೆಯ ಉದ್ಯೋಗಿಗಳು ಉಪಸ್ಥಿತರಿದ್ದರು.

ಎಐಬಿಇ ಪಾಸಾಗದ ವಕೀಲರನ್ನು ಪತ್ತೆಹಚ್ಚಲು ವ್ಯವಸ್ಥೆ ರೂಪಿಸಿ: ವಕೀಲರ ಪರಿಷತ್ತಿಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು, ಅ.19: ಅಖಿಲ ಭಾರತ ವಕೀಲರ ಪರೀಕ್ಷೆ (ಎಐಬಿಇ) ಉತ್ತೀರ್ಣರಾಗದೆ ನಿಗದಿತ ಅವಧ

ದೇವತೆಗಳು ಕೋಲು ಹಿಡಿದು ದಂಡಿಸುವುದಿಲ್ಲ, ಬುದ್ಧಿಯನ್ನೇ ಬದಲಿಸುತ್ತಾರೆ: ರಾಘವೇಶ್ವರ ಶ್ರೀ

- ನಮ್ಮ ಏಳಿಗೆ-ಪತನದ ಲಕ್ಷಣಗಳು ನಮ್ಮ ಬುದ್ಧಿಯಲ್ಲೇ ಇದೆ
- ಸೃಷ್ಟಿಯನ್ನು ನಾವು ವ್ಯತ್ಯಾಸ ಗೊಳಿಸಬಾರದು
- ಶ್ರೀಗಳನ್ನು ಭೇಟಿಯಾಗಿ ಆಶೀರ್ವಾದ ಪಡೆದ ಬಿ. ವೈ.ವಿಜಯೇಂದ್ರ

ಬೆಂಗಳೂರು, ಅ.19: ದೇವತೆಗಳು ಕೋಲನ್ನು ತೆಗೆದುಕೊಂಡು ಜೀವಿಗಳಿಗೆ ದಂಡನೆ ಮಾಡುವುದಿಲ್ಲ. ಯಾರನ್ನಾದರೂ ಉದ್ಧಾರವಾಗಿಸಬೇಕೆಂದಾಗ ದೇವರು ಜೀವಿಗೆ ಒಳ್ಳೆಯ ಬುದ್ಧಿಯನ್ನು ಅನುಗ್ರಹಿಸುತ್ತಾರೆ. ಹಾಗೆಯೇ ಶಿಕ್ಷೆ ಕೊಡಬೇಕಾದಾಗ ಬುದ್ಧಿಯನ್ನು ಕೆಡಿಸುವ ಮೂಲಕ ಜೀವಿಯು ತೊಂದರೆಗೆ ಒಳಗಾಗುವಂತೆ ಮಾಡುತ್ತಾರೆ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಬೆಂಗಳೂರಿನ ಗಿರಿನಗರದಲ್ಲಿರುವ ಶ್ರೀರಾಮ ಚಂದ್ರಾಪುರ ಮಠದ ಶಾಖೆಯಲ್ಲಿ ನಡೆಯುತ್ತಿರುವ 'ನವರಾತ್ರ ನಮಸ್ಯಾ' ಕಾರ್ಯಕ್ರಮದಲ್ಲಿ ಸೋಮವಾರ ಲಲಿತೋಪಾಖ್ಯಾನ ಪ್ರವಚನವನ್ನು ಅನುಗ್ರಹಿಸಿದ ಶ್ರೀಗಳು, ನಮ್ಮ ಪತನ ಹಾಗೂ ಏಳ್ಗೆಯ ಲಕ್ಷಣಗಳನ್ನು ನಮ್ಮಲ್ಲೇ ಕಾಣಬಹುದಾಗಿದ್ದು, ನಮ್ಮ ಬುದ್ಧಿ ಯಾವ ದಿಕ್ಕಿನಲ್ಲಿ ಸಾಗಿದೆ, ನಮ್ಮ ಆಚರಣೆಗಳು ಏನಾಗಿದೆ ಎಂಬುದನ್ನು ಅವಲೋಕಿಸಿಕೊಂಡರೆ ನಮ್ಮ ಭವಿಷ್ಯವನ್ನು ನಾವು ಅರಿತುಕೊಳ್ಳಬಹುದು. ನಾವು ಸರಿದಾರಿಯಲ್ಲಿದ್ದರೆ ದೇವರು ನಮ್ಮನ್ನು ಅನುಗ್ರಹಿಸುತ್ತಿದ್ದಾನೆ ಎಂದೂ, ತಪ್ಪು ದಾರಿಯಲ್ಲಿ ಹೆಜ್ಜೆಯನ್ನಿಟ್ಟಿದ್ದರೆ ನಾವು ದೇವರು ಅವಕೃಪೆಗೆ ಒಳಗಾಗಿದ್ದೇವೆ ಎಂದು ಅರ್ಥ. ಶಿವ ಭಕ್ತನಾಗಿ ನಿತ್ಯ ದೇವರ ಆರಾಧನೆಯಲ್ಲಿ ತೊಡಗಿಸಿ ಕೊಂಡಿದ್ದ ಭಂಡಾಸುರನು, ವಿಷ್ಣು ಮಾಯೆಯಿಂದ ಮೋಹಿನಿಯ ಮೋಹಕ್ಕೆ ಒಳಗಾಗಿ ಅವುಗಳಿಂದ ವಿಮುಖನಾದ. ಆ ಮೂಲಕ ಅವನ ಅವನತಿ ಆರಂಭವಾಯಿತು ಎಂದು ಭಂಡಾಸುರನ ಕಥಾಭಾಗವನ್ನು ವಿವರಿಸಿದರು.

ಸೃಷ್ಟಿಯನ್ನು ನಾವು ಯಾವಾಗಲೂ ವ್ಯತ್ಯಾಸಗೊಳಿಸಲು ಹೋಗಬಾರದು. ಸೃಷ್ಟಿ ಎಂಬುದು ಶಂಕರವಾದರೆ, ಸೃಷ್ಟಿಯಲ್ಲಿ ನಮ್ಮ ಹಸ್ತಕ್ಷೇಪ ಸಂಕರವಾಗಿದೆ. ನೈಸರ್ಗಿಕ ಪ್ರಕ್ರಿಯೆ ಯಾವಾಗಲು ಸುಂದರವಾಗಿದ್ದು, ಅದರಲ್ಲಿ ನಾವು ಹಸ್ತಕ್ಷೇಪವನ್ನು ಮಾಡಬಾರದು. ತಾರಕಾಸುರನ ವಧೆಯು ಶಿವನ ಮಗನಿಂದ ಆಗಬೇಕಿತ್ತು. ಧ್ಯಾನದಲ್ಲಿದ್ದ ಶಿವನನ್ನು ಒಲಿಸಿಕೊಳ್ಳಲು ದೇವತೆಗಳು ತಪ್ಪಸ್ಸಿನ ಮಾರ್ಗವನ್ನು ಹಿಡಿಯಬಹುದಾಗಿತ್ತು. ಆದರೆ ಮನ್ಮಥನ ಬಾಣವನ್ನು ಶಿವನ ಮೇಲೆ ಪ್ರಯೋಗಿಸುವಂತೆ ಮಾಡಿದರು. ಹೂವನ್ನು ಬಾಣವಾಗಿ ಪ್ರಯೋಗ ಮಾಡುವ ಬದಲು, ಅದೇ ಹೂವನ್ನು ಪೂಜೆಗೆ ಬಳಸಿದ್ದರೆ ಶಿವ ಸಂಪ್ರೀತನಾಗುತ್ತಿದ್ದ. ತಾರಕಾಸುರನ ಸಂಹಾರವಾಗುತ್ತಿತ್ತು. ಆದರೆ ಮನ್ಮಥನ ಬಾಣ ಪ್ರಯೋಗವಾದ್ದರಿಂದ ತಾರಕಾಸುರನ ಪೀಡೆಯ ಜೊತೆಗೆ ಭಂಡಾಸುರನ ಕಾಟವನ್ನೂ ದೇವತೆಗಳು ಅನುಭವಿಸುವಂತಾಯಿತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಲಲಿತೋಪಾಖ್ಯಾನದ ಪ್ರವಚನದಲ್ಲಿ ದೇವಿಯನ್ನು ವರ್ಣಿಸುತ್ತಿರುವುದು ರಾಜರಾಜೇಶ್ವರಿಯ ದಿವ್ಯ ರೂಪ ನಮ್ಮ ಚಿತ್ತಭಿತ್ತಿಯಲ್ಲಿ ಮೂಡಿ ಧ್ಯಾನದಲ್ಲಿ ಆಕೆ ಮೂಡಲಿ ಎಂದಾದರೆ, ಈ ಪ್ರವಚನ ಮಾಲಿಕೆಯಲ್ಲಿನ ಕಥೆಗಳು ಅದರಲ್ಲಿನ ತತ್ತ್ವಗಳನ್ನು ನಾನು ನೆನೆಪಿಡಲು ಸಹಕಾರಿ. ಈ ಪ್ರವಚನ ಮಾಲಿಕೆಯು ಹಯಗ್ರೀಯನಿಂದ ಅಗಸ್ತ್ಯ ಮಹರ್ಷಿಗಳಿಗೆ ಉಪದೇಶಿಸಿದ ಲಲಿತೋಪಾಖ್ಯಾನದ ಯಥಾವತ್ ಪ್ರಸ್ತುತಿಯಾಗಿದ್ದು, ಜನಮನ ರಂಜನೆಯ ವಿಷಯಗಳನ್ನು ಇಲ್ಲಿ ಪ್ರಸ್ತುತ ಪಡಿಸುತ್ತಿಲ್ಲ ಎಂದರು.

ಭಾಜಪದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಸವನಗುಡಿ ಶಾಸಕ ಎಲ್. ಎ. ರವಿ ಸುಬ್ರಮಣ್ಯ, ಖ್ಯಾತ ಶಿಲ್ಪಿ ಜಿ.ಎಲ್. ಭಟ್, ಉದ್ಯಮಿ ಅರವಿಂದ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಗಳ ಆಶೀರ್ವಾದ ಪಡೆದರು. ಸರಸ್ವತೀ ಸೂಕ್ತ ಹವನ, ದುರ್ಗಾದೀಪ ನಮಸ್ಕಾರ, ಕುಂಕುಮಾರ್ಚನೆ, ರಾಜರಾಜೇಶ್ವರೀ ಪೂಜೆ ನಡೆಯಿತು. ಸುಬ್ರಾಯ ಹೆಗಡೆ ಹೊಸಕೋಟೆ, ಸಂದೀಪ್ ಮೂರ್ತಿ, ಪ್ರಕಾಶ್ ಮಳಲಗದ್ದೆ, ದಿನಪ್ರಧಾನರಾಗಿ ಸುಬ್ರಹ್ಮಣ್ಯ ಕೆರೆಮೂಲೆ ದಂಪತಿ ಉಪಸ್ಥಿತರಿದ್ದರು.

ಇಂದು ಭವ್ಯ ಮೆರವಣಿಗೆ

ಮಂಗಳವಾರ ಸಂಜೆ ರಾಜರಾಜೇಶ್ವರೀ ಮೂರ್ತಿಯ ವಿಸರ್ಜನೆ ನಡೆಯಲಿದ್ದು, ಭವ್ಯ ಮೆರವಣಿಗೆ ನಡೆಯಲಿದೆ. ಬೆಳಗ್ಗೆ ಶತಚಂಡಿಕಾ ಮಹಾಯಾಗ ನಡೆಯಲಿದ್ದು, ವಿಜಯದಶಮಿಯ ಅಂಗವಾಗಿ ಬನ್ನಿಪೂಜೆ ನಡೆಯಲಿದೆ.

ಗಿನ್ನೆಸ್ ದಾಖಲೆ ಸೇರಿದ ದಸರಾ ಡ್ರೋನ್ ಶೋ

ಆಗಸದಲ್ಲಿ ರಾಷ್ಟ್ರೀಯ ಪಕ್ಷಿ ನವಿಲಿನ ಬೃಹತ್ ಚಿತ್ತಾರ ಮೂಡಿಸಿದ 3473 ಡ್ರೋನ್‌ಗಳು

ಮೈಸೂರು, ಅ.19: ದಸರಾ ಡ್ರೋನ್ ಶೋ ಮತ್ತೊಮ್ಮೆ ಗಿನ್ನೆಸ್ ವಿಶ್ವ ದಾಖಲೆ ಪುಸ್ತಕದಲ್ಲಿ ಸ್ಥಾನ ಪಡೆದಿದೆ. ನಿನ್ನೆ ಅಕ್ಟೋಬರ್ 18ರ ರಾತ್ರಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಮೇಲೆ 3,473 ಡ್ರೋನ್‌ಗಳು ಹಾರಾಟ ನಡೆಸಿ, ಭಾರತದ ರಾಷ್ಟ್ರೀಯ ಪಕ್ಷಿಯಾದ ನವಿಲಿನ ಬೃಹತ್ ನೃತ್ಯಮಯ ಆಕೃತಿಯನ್ನು ರೂಪಿಸಿದವು. ಈ ಮೂಲಕ ಆಕಾಶದಲ್ಲಿ ಅತಿ ದೊಡ್ಡ ಆಕೃತಿ ರಚಿಸಿದ ಸಾಧನೆಗಾಗಿ ಗಿನ್ನೆಸ್ ವಿಶ್ವ ದಾಖಲೆಯನ್ನು ನಿರ್ಮಿಸಲಾಯಿತು.

ಮೈಸೂರು ದಸರಾ ಡ್ರೋನ್ ಶೋನ ಮೊದಲ ಎರಡು ದಿನಗಳ ಪ್ರದರ್ಶನಗಳ ವೇಳೆ ಪ್ರೇಕ್ಷಕರ ಸಂಖ್ಯೆ ಭಾರಿ ಪ್ರಮಾಣದಲ್ಲಿತ್ತು. ಆಸನ ವ್ಯವಸ್ಥೆಯ ಅಧಿಕೃತ ಸಾಮರ್ಥ್ಯ 33,500 ಆಗಿದ್ದರೂ, 40,000ಕ್ಕೂ ಹೆಚ್ಚು ಜನರು ಮೈದಾನದಲ್ಲಿ ಪ್ರದರ್ಶನ ವೀಕ್ಷಿಸಿದರು. ಮತ್ತೊಂದೆಡೆ, 20,000ಕ್ಕೂ ಅಧಿಕ ಮಂದಿ ಮೈದಾನದ ಹೊರಗೆ ಸೇರಿ ಡ್ರೋನ್ ಪ್ರದರ್ಶನವನ್ನು ಕಣ್ತುಂಬಿಕೊಂಡರು. ನಗರದಾದ್ಯಂತ ಮನೆಗಳ ಟೆರೇಸ್‌ಗಳು, ಬಾಲ್ಕನಿಗಳು ಹಾಗೂ ರೆಸ್ಟೋರೆಂಟ್‌ಗಳಿಂದಲೂ ಜನರು ಪ್ರದರ್ಶನ ವೀಕ್ಷಿಸಿದರು. ಇದರಿಂದ ಮನೆಗಳ ಮೇಲ್ಛಾವಣಿ ಮತ್ತು ರೆಸ್ಟೋರೆಂಟ್‌ಗಳ ಊಟದ ಮೇಜುಗಳೇ ಪ್ರದರ್ಶನ ವೀಕ್ಷಣೆಯ ಮುಂಚೂಣಿ ಆಸನಗಳಂತಾದವು.

ವೀಕ್ಷಣೆಗೆ ಅನುಕೂಲಕರವಾದ ಪರಿಸ್ಥಿತಿಗಳಲ್ಲಿ ದೊಡ್ಡ ಪ್ರಮಾಣದ ಡ್ರೋನ್ ಪ್ರದರ್ಶನಗಳನ್ನು 10 ಕಿ.ಮೀ.ಗೂ ಹೆಚ್ಚು ದೂರದಿಂದ ನೋಡಬಹುದು ಎಂದು ಬೋಟ್‌ಲ್ಯಾಬ್ ಡೈನಾಮಿಕ್ಸ್‌ನ ಮಾರ್ಕೆಟಿಂಗ್ ಮತ್ತು ಸಂವಹನ ವಿಭಾಗದ ಮುಖ್ಯಸ್ಥೆ ನೇಹಾ ವರ್ಮಾ ತಿಳಿಸಿದ್ದಾರೆ. ಸ್ಥಳೀಯರಿಗೆ ಮೈಸೂರು ದಸರಾ ಡ್ರೋನ್ ಶೋ ಕೇವಲ ಹೊಸ ಆಕರ್ಷಣೆಯಾಗಿ ಉಳಿದಿಲ್ಲ. ಅರಮನೆಯ ದೀಪಾಲಂಕಾರ ವೀಕ್ಷಣೆ ಅಥವಾ ಚಾಮುಂಡಿ ಬೆಟ್ಟದ ದೇವಸ್ಥಾನಕ್ಕೆ ಭೇಟಿ ನೀಡುವಷ್ಟೇ ಮಹತ್ವದ ವಾರ್ಷಿಕ ಸಂಪ್ರದಾಯವಾಗಿ ಬೆಳೆದಿದೆ. ಪ್ರದರ್ಶನ ವೀಕ್ಷಿಸಿದವರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

ನಾವು ಪ್ರತಿವರ್ಷ ಕುಟುಂಬದೊಂದಿಗೆ ಬರುತ್ತೇವೆ. ದೀಪಗಳಿಂದ ಕಂಗೊಳಿಸುವ ಅರಮನೆಯ ವೀಕ್ಷಣೆಯಂತೆಯೇ ಡ್ರೋನ್‌ಶೋ ಕೂಡ ನಮ್ಮ ದಸರಾ ಆಚರಣೆಯ ಅವಿಭಾಜ್ಯ ಭಾಗವಾಗಿದೆ ಎಂದು ಮೂರು ತಲೆಮಾರಿನ ಕುಟುಂಬದೊಂದಿಗೆ ಆಗಮಿಸಿದ್ದ ಮೈಸೂರಿನ ನಿವಾಸಿ ರಘುವೇಂದ್ರ ಹೇಳಿದ್ದಾರೆ.

ನಮ್ಮ ರೆಸ್ಟೋರೆಂಟ್‌ನ ಬಾಲ್ಕನಿಯಿಂದಲೇ ಡ್ರೋನ್ ಪ್ರದರ್ಶನ ಆಕಾಶದಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು ಎಂದು ಮೈಸೂರಿನ ರೆಸ್ಟೋರೆಂಟ್ ಮಾಲೀಕ ವಿನೋದ್ ಹೇಳಿದ್ದಾರೆ. ಮೊದಲ ದಿನದ ಮೈಸೂರು ದಸರಾ ಡ್ರೋನ್ ಶೋ ಈಗಾಗಲೇ ಸಾಮಾಜಿಕ ಮಾಧ್ಯಮಗಳು ಮತ್ತು ಮೆಸೇಜಿಂಗ್ ಗುಂಪುಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗುವ ಮೂಲಕ ವೈರಲ್ ಆಗಿತ್ತು. ಇದೀಗ 3,473 ಡ್ರೋನ್‌ಗಳಿಂದ ಅದ್ಭುತ ನವಿಲಿನ ಆಕೃತಿ ರಚಿಸಿ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿರುವ ಸುದ್ದಿ ಇನ್ನಷ್ಟು ವೇಗವಾಗಿ ಹರಡುತ್ತಿದ್ದು, ದೇಶದಾದ್ಯಂತ ಗಮನ ಸೆಳೆಯುತ್ತಿದೆ.

ಗಮನಸೆಳೆದ ಪ್ರದರ್ಶನ

ಪ್ರತಿವರ್ಷ ದಸರಾ ಸಂದರ್ಭದಲ್ಲಿ ಮೈಸೂರಿಗೆ ವಿದ್ಯುತ್ ದೀಪಾಲಂಕಾರದ ಮೆರುಗು ನೀಡುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್), ಈ ವರ್ಷ 146 ಕಿ.ಮೀ. ಉದ್ದದ ರಸ್ತೆ ಜಾಲಕ್ಕೆ ದೀಪಾಲಂಕಾರ ಮಾಡಿದೆ. ಇದೀಗ ಮೈಸೂರು ದಸರಾ ಡ್ರೋನ್ ಶೋ ನಗರದ ರಾತ್ರಿಯ ಹಬ್ಬದ ಸಂಭ್ರಮಕ್ಕೆ ಹೊಸ ಮೆರುಗು ನೀಡಿದೆ.

ಸತತ ಐದನೇ ವರ್ಷ ಮೈಸೂರು ದಸರಾ ಉತ್ಸವದಲ್ಲಿ ಭಾಗವಹಿಸುತ್ತಿರುವ ಬೋಟ್‌ಲ್ಯಾಬ್ ಡೈನಾಮಿಕ್ಸ್, ಪ್ರತಿ ವರ್ಷವೂ ಡ್ರೋನ್ ಪ್ರದರ್ಶನದ ಪ್ರಮಾಣವನ್ನು ಹೆಚ್ಚಿಸುತ್ತಾ ಬಂದಿದೆ. 2022 ಮತ್ತು 2023ರಲ್ಲಿ 250 ಡ್ರೋನ್‌ಗಳು, 2024ರಲ್ಲಿ 1,500 ಡ್ರೋನ್‌ಗಳು ಹಾಗೂ 2025ರಲ್ಲಿ 3,000 ಡ್ರೋನ್‌ಗಳ ಸಮೂಹದೊಂದಿಗೆ 2,983 ಡ್ರೋನ್‌ಗಳಿಂದ ಹುಲಿಯ ಆಕೃತಿ ರಚಿಸಿ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಲಾಗಿತ್ತು. ಇದೀಗ 2026ರಲ್ಲಿ 3,473 ಡ್ರೋನ್‌ಗಳಿಂದ ನವಿಲಿನ ಆಕೃತಿ ರಚಿಸುವ ಮೂಲಕ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದೆ. ಈ ಬಾರಿ ಪ್ರದರ್ಶನದಲ್ಲಿ ಹಲವು ಆಕರ್ಷಕ ದೃಶ್ಯಗಳನ್ನು ರೂಪಿಸಲಾಗಿತ್ತು. ಮುಖ್ಯಮಂತ್ರಿ ಅವರಿಗೆ ಕನ್ನಡದಲ್ಲಿ ದಸರಾ ಶುಭಾಶಯ ಕೋರುವ ಸಂದೇಶ, ಸುರುಳಿಯಾಕಾರದ ನಕ್ಷತ್ರಪುಂಜ, ರಾಷ್ಟ್ರಧ್ವಜ ಹಾರಿಸುವ ಸೈನಿಕ, ಚಟ್ಟೆ, ಘರ್ಜಿಸುವ ಸಿಂಹ, ವಿವಿಧ ಕಲ್ಯಾಣ ಯೋಜನೆಗಳ ಸಂಕೇತಗಳಿರುವ ಕರ್ನಾಟಕದ ನಕ್ಷೆ, ವಿಷ್ಣುವಿನ ಸುದರ್ಶನ ಚಕ್ರ, ಶಿವ, ನಂದಿ, ಅಂಬಾರಿ ಆನೆ ಹಾಗೂ ತಾಯಿ ಚಾಮುಂಡೇಶ್ವರಿಯ ಆಕೃತಿಗಳು ಪ್ರೇಕ್ಷಕರ ಗಮನ ಸೆಳೆದವು.

ದಕ್ಷಿಣ ಭಾರತದ ದಸರಾದಿಂದ ಪೂರ್ವ ಭಾರತದ ದುರ್ಗಾಪೂಜೆಯವರೆಗೆ, ಭಾರತದಲ್ಲಿ ಹಬ್ಬಗಳನ್ನು ಆಚರಿಸುವ ವಿಧಾನವನ್ನು ಡ್ರೋನ್ ಪ್ರದರ್ಶನಗಳು ಹೇಗೆ ಬದಲಾಯಿಸುತ್ತಿವೆ ಎಂಬುದಕ್ಕೆ ಈ ಕಾರ್ಯಕ್ರಮಗಳು ಸಾಕ್ಷಿಯಾಗಿವೆ. 700ಕ್ಕೂ ಹೆಚ್ಚು ಪ್ರದರ್ಶನಗಳು, 10,000ಕ್ಕೂ ಅಧಿಕ ಡ್ರೋನ್‌ಗಳ ಸಮೂಹ ಮತ್ತು ಈಗ ಎಂಟು ಗಿನ್ನೆಸ್ ವಿಶ್ವ ದಾಖಲೆಗಳನ್ನು ಹೊಂದಿರುವ ಬೋಟ್‌ಲ್ಯಾಬ್ ಡೈನಾಮಿಕ್ಸ್, ಡ್ರೋನ್ ಲೈಟ್ ಶೋ ಕ್ಷೇತ್ರದ ಪ್ರಮುಖ ಸಂಸ್ಥೆಗಳಲ್ಲಿ ಒಂದಾಗಿದೆ. ಮೈಸೂರು ದಸರಾ ಡ್ರೋನ್ ಶೋ ವೀಕ್ಷಿಸಲು ಇನ್ನೂ ಅವಕಾಶವಿದೆ. ನಾಡಹಬ್ಬ ಮೈಸೂರು ದಸರಾ 2026ರ ಅಂಗವಾಗಿ ನಾಳೆ ಮತ್ತು 21ರಂದು ರಾತ್ರಿ 7 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಪ್ರದರ್ಶನಗಳು ನಡೆಯಲಿವೆ.

ಕಾಂತಾರ ಖ್ಯಾತಿಯ ರಿಷಬ್ ಶೆಟ್ಟಿ ಹೊಸಚಿತ್ರಕ್ಕೆ ಸಾವಿರಕ್ಕೂ ಹೆಚ್ಚು ಕಲಬುರಗಿ ಕಲಾವಿದರಿಂದ ಶುಭ ಹಾರೈಕೆ

ಕಲಬುರಗಿ, ಅ.19: ಕಾಂತಾರ ಚಿತ್ರದ ಖ್ಯಾತಿಯ ರಿಷಭ್ ಶೆಟ್ಟಿ ಅವರ ಹೊಸಚಿತ್ರ ಶೀಘ್ರದಲ್ಲಿ ಸೆಟ್ಟೇರಲಿದ್ದು ಹೊಸ ಪ್ರತಿಭೆಗಳ ಹುಡುಕಾಟದ ಆಡಿಷನ್, ಕಾಸ್ಟಿಂಗ್ ಕಾಲ್ ಗೆ ಕಲಬುರಗಿಯ ಸಾವಿರಕ್ಕೂ ಹೆಚ್ಚು ಕಲಾವಿದರು ಪಾಲ್ಗೊಂಡು ಅದ್ಭುತ ಯಶಸ್ಸು ಕಂಡಿದೆ. ಕಲಾವಿದರ ಉತ್ಸಾಹಕ್ಕೆ ಗಣ್ಯರ ತಂಡ ಶುಭ ಹಾರೈಸಿದೆ.

ಕಲಬುರಗಿಯ ಶರಣ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಆವರಣದಲ್ಲಿ ಅ. 18 ಮತ್ತು 19 ರಂದು ಎರಡು ದಿನಗಳಲ್ಲಿ ಹೊಸ ನಟ ನಟಿಯರ ಆಡಿಶನ್ ಕಾಸ್ಟಿಂಗ್ ಕಾಲ್ ಗೆ ಉತ್ತಮ ಪ್ರತಿಕ್ರಿಯೆ ಕಂಡು ಬಂದಿದೆ. ಸುಮಾರು ಸಾವಿರಕ್ಕೂ ಹೆಚ್ಚು ರಂಗಭೂಮಿ ಕಲಾವಿದರು ನೃತ್ಯ ತಂಡದ ಸದಸ್ಯರು, ಯೂಟ್ಯೂಬರ್‌ಗಳು, ಟಿಕ್‌ಟಾಕ್ ಖ್ಯಾತಿಯ ಕಲಾವಿದರು, ಹಾಡುಗಾರರು, ಹವ್ಯಾಸಿ ರಂಗಭೂಮಿ ಕಲಾವಿದರು ರಿಷಭ್ ಶೆಟ್ಟಿ ಅವರ ಹೊಸ ಚಿತ್ರಕ್ಕೆ ಸೇರಲು ಕಲ್ಯಾಣ ಕರ್ನಾಟಕ ಭಾಗದ ನಟ–ನಟಿಯರು ನಟಿಯರು ಉತ್ಸಾಹದಿಂದ ಪಾಲ್ಗೊಂಡರು. ಉತ್ತರ ಕರ್ನಾಟಕದ ಕಥಾ ವಸ್ತುವಿನೊಂದಿಗೆ ರಚನೆ ಮಾಡಿದ ಬೆಲ್ ಬಾಟಮ್ ಚಿತ್ರ ಖ್ಯಾತಿಯ ನಿರ್ದೇಶಕ ಚಿರಂತ್ ಅವರ ನೇತೃತ್ವದ ತಂಡ ನಟ–ನಟಿಯರ ಆಯ್ಕೆ ಪ್ರಕ್ರಿಯೆಯನ್ನು ನಡೆಸಿತು . ಚಿತ್ರಕಥೆಯ ಚಿತ್ರೀಕರಣವು ಶೀಘ್ರದಲ್ಲೇ ಪ್ರಾರಂಭ ವಾಗಲಿದೆ ಎಂದು ಚಿರಂತನ್ ಹಾಗೂ ತಂಡದ ಸದಸ್ಯ ಸುಹಾಸ್ ಶೆಟ್ಟಿ ತಿಳಿಸಿದರು.

ಚಿತ್ರತಂಡದ ನಿರ್ದೇಶಕ ಚಿರಂತ್ ಕ್ಯಾಮರಾಮ್ಯಾನ್ ಅಭಿನವ್, ಆದಿತ್ಯ, ಸುಭಾಷ್ ಶೆಟ್ಟಿ, ದಿವ್ಯಾಧರ್ ಶೆಟ್ಟಿ, ಅಕ್ಷಯ್, ಛಾಯಾಗ್ರಾಹಕ ಪೂಜಾ ಸೇರಿದಂತೆ 20ಕ್ಕೂ ಹೆಚ್ಚು ಚಿತ್ರತಂಡದ ಸದಸ್ಯರು ಆಯ್ಕೆ ಪ್ರಕ್ರಿಯೆ ನಡೆಸಿದರು.

ಚಿತ್ರದ ಯಶಸ್ವಿಗೆ ಬ್ಯಾಂಕ್ ಆಫ್ ಬರೋಡ ಸನ್ಮಾನ - ಗಣ್ಯರ ಹಾರೈಕೆ

ಕಾಂತಾರ ಚಿತ್ರದ ಮೂಲಕ ವಿಶ್ವದಲ್ಲೇ ಜನಪ್ರಿಯತೆ ಗಳಿಸಿದ ರಿಷಭ್ ಶೆಟ್ಟಿ ಅವರು ಶರಣರ ನಾಡಿನಲ್ಲಿ ಉತ್ತರ ಕರ್ನಾಟಕ ಶೈಲಿಯ ಹಾಗೂ ಭಾಷಾ ಸೊಗಡಿನೊಂದಿಗೆ ಚಿತ್ರ ನಿರ್ಮಾಣ ಮಾಡುತ್ತಿರುವುದು ಸಂತಸದ ಸಂಗತಿ. ಆ ಮೂಲಕ ಈ ಭಾಗದ ಕಲಾವಿದರಿಗೆ ಅವಕಾಶದ ಬಾಗಿಲು ತೆರೆದಂತಾಗಿದೆ ಎಂದು ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥರಾದ ಡಾ. ಸದಾನಂದ ಪೆರ್ಲ ಚಿತ್ರತಂಡಕ್ಕೆ ಸನ್ಮಾನ ನೆರವೇರಿಸಿದ ನಂತರ ಹೇಳಿದರು. ಬ್ಯಾಂಕ್ ಆಫ್ ಬರೋಡದ ಹೆಚ್ಚುವರಿ ಮಹಾ ಪ್ರಬಂಧಕರಾದ ಅಮಿತ್ ಶೆಟ್ಟಿ ಮಾತನಾಡಿ ಈ ಭಾಗದ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ರಿಷಬ್ ಶೆಟ್ಟಿ ಅವರ ಚಿಂತನೆ ಸ್ವಾಗತಾರ್ಹವಾಗಿದ್ದು ಚಿತ್ರ ಯಶಸ್ಸು ಹೊಂದಲಿ ಎಂದು ಶುಭಹಾರೈಸಿದರು. ಬ್ಯಾಂಕ್ ವತಿಯಿಂದ ಚಿತ್ರತಂಡದ ಸದಸ್ಯರಿಗೆ ಸ್ಮರಣಿಕೆ ನೀಡಿ ಗೌರವದ ಸನ್ಮಾನ ನೆರವೇರಿಸಲಾಯಿತು.

ಖ್ಯಾತ ನಿರ್ದೇಶಕ ಹಾಗೂ ನಟರಾದ ರಿಷಬ್ ಶೆಟ್ಟಿ ಅವರ ಹೊಸ ಚಿತ್ರಕ್ಕಾಗಿ ಕಲಬುರಗಿಯ ಕಲಾವಿದರ ಆಯ್ಕೆ ಮಾಡಿರುವುದು ಹೆಮ್ಮೆಯ ಸಂಗತಿ ಎಂದರು

ಕಲ್ಯಾಣ ಕರ್ನಾಟಕದಲ್ಲಿ ಎಎಪಿ ಬಲವರ್ಧನೆ: ಅನಿಲ್ ಝಾ

ಕಲಬುರಗಿ, ಅ. 19: ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಆಮ್ ಆದ್ಮಿ ಪಕ್ಷವನ್ನು (ಎಎಪಿ) ತಳಮಟ್ಟದಿಂದ ಸಂಘಟಿಸಿ, ಬಲವರ್ಧನೆ ಗೊಳಿಸಿ, ಮುಂಬರುವ ವಿಧಾನ ಸಭಾ ಚುನಾವಣೆಗೆ ಸಜ್ಜುಗೊಳಿಸಲಾಗುವುದು ಎಂದು ದೆಹಲಿಯ ಎಎಪಿ ಶಾಸಕ, ಪಕ್ಷದ ರಾಜ್ಯ ಉಸ್ತುವಾರಿ ಅನಿಲ್ ಝಾ ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮುಂಬರುವ ಎಲ್ಲ ಚುನಾವಣೆಗಳಲ್ಲಿ ಎಎಪಿ ಸ್ಪರ್ಧಿಸಲಿದೆ. ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಎಎಪಿ ಅಭ್ಯರ್ಥಿಯಾಗಿ ಸಾಯಿಬಣ್ಣ ಜಮಾದಾರ ಅವರನ್ನು ಕಣಕ್ಕಿಳಿಸ ಲಾಗಿದೆ ಎಂದರು.

ರಾಜ್ಯದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಅಲ್ಪಸಂಖ್ಯಾತರ ಹೆಸರಿನಲ್ಲಿ ಕೇವಲ ದರೋಡೆ ಮಾಡಿವೆ. ಎರಡೂ ಪಕ್ಷಗಳು ಧರ್ಮದ ಹೆಸರಿನಲ್ಲಿ ದಂಗೆ ಮಾಡಿಸಿವೆ ಹೊರತು ಅಭಿವೃದ್ಧಿ ಕೆಲಸ ಮಾಡಿಲ್ಲ ಎಂದು ಆರೋಪಿಸಿದರು.

ದೆಹಲಿಯಲ್ಲಿ ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಎಎಪಿ ಕ್ರಾಂತಿಕಾರಿ ಕೆಲಸ ಮಾಡಿದೆ. ಕರ್ನಾಟಕದಲ್ಲೂ ಮುಂಬ

ಶಾಲೆಗಿಂತ ದೇವಸ್ಥಾನಗಳ ಸೃಷ್ಟಿ ಹೆಚ್ಚಳ: ಸಾಹಿತಿ ಕುಂ.ವೀರಭದ್ರಪ್ಪ

ಕಲಬುರಗಿ, ಅ. 19: ದೇಶದಲ್ಲಿ ಕಳೆದ 10 ವರ್ಷಗಳಲ್ಲಿ ಧರ್ಮವೇ ಬಹು ಆಕರ್ಷಕವಾಗಿ ಕಾಣಿಸುತ್ತಿದೆ. ನಾಗರಿಕ ಸುಶಿಕ್ಷಿತ ಸಮಾಜಕ್ಕೆ ಅಗತ್ಯವಿರುವ ಶಾಲೆ, ಶೈಕ್ಷಣಿಕ ಸಂಸ್ಥೆಗಳಿಂತಲೂ ಧರ್ಮ, ದೇವಸ್ಥಾನಗಳು ಅತಿಹೆಚ್ಚು ಸೃಷ್ಟಿಯಾಗಿವೆ ಎಂದು ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಅಭಿಪ್ರಾಯಪಟ್ಟರು.

ನಗರದ ರಂಗಾಯಣ ಸಭಾಂಗಣದಲ್ಲಿ ಬುದ್ಧಂಕುರ ಪ್ರಕಾಶನದಿಂದ ಆಯೋಜಿಸಿದ್ದ ಸಂತೋಷಕುಮಾರ ಕರಹರಿ ಅವರ ಹೈಕುಗಳ ಸಂಕಲನ 'ನಿಜದರಿವು' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಧರ್ಮ–ಧರ್ಮಗಳ ನಡುವೆ ಬೆಂಕಿ ಹಚ್ಚುವ, ಧರ್ಮಗಳ ಮೂಲಕ ಮನುಷ್ಯರನ್ನು ವಿಭಜಿಸುವ ಸನ್ನಿವೇಶ ದೇಶದಲ್ಲಿದೆ. ದಲಿತರನ್ನು ದಲಿತರನ್ನಾಗಿ, ಮುಸ್ಲಿಮರನ್ನು ಹೊರದೇಶಿಗರನ್ನಾಗಿ ನೋಡುವ ಪ್ರವೃತ್ತಿ ಬೆಳೆಸಲಾಗುತ್ತಿದೆ. ಇಷ್ಟಾದರೂ ಪ್ರಶ್ನಿಸದೇ ಇರುವುದು ಜೀವಂತ ಸಮಾಜವೇ ಅಲ್ಲ, ಅದು ನಿರ್ಜೀವ ಸಮಾಜ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಾರತ ಬಹುತ್ವದ ದೇಶ. ಆದರೆ, ಸರ್ಕಾರಗಳು ಒಂದು ದೇಶ, ಒಂದು ಚುನಾವಣೆ, ಒಂದು ಭಾಷೆ, ಒಂದು ಧರ್ಮ ಎನ್ನುತ್ತಿರುವುದು ದೇಶದ ಬಹುತ್ವ ನಾಶ ಮಾಡುವ ಮೊದಲ ಹೆಜ್ಜೆ. ಧರ್ಮಗಳ ನಡುವಣ ಸಾಮರಸ್ಯ ಅದಮ್ಯ. ಹೇಗೆ ಹೃದಯ, ಯಕೃತ್ತು, ಶ್ವಾಸಕೋಶಗಳಂಥ ಅಂಗಾಂಗಳು ಚೆನ್ನಾಗಿದ್ದರೆ ದೇಹ ಆರೋಗ್ಯಯುತವಾಗಿರುತ್ತದೆಯೋ ಅಂತೆಯೇ ಧರ್ಮಗಳು ಸಾಮರಸ್ಯದಿಂದ ಇದ್ದರೆ ದೇಶ ಸದೃಢವಾಗಿರುತ್ತದೆ. ಮುಸ್ಲಿಂ, ಕ್ರೈಸ್ತ, ಸಿಖ್ ಎಂದೆಲ್ಲ ಹೊರಗಿಟ್ಟರೆ ದೇಶವು ಅನಾರೋಗ್ಯ ಪೀಡಿತವಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಲಬುರಗಿ ನಗರದ ರಂಗಾಯಣ ಸಭಾಂಗಣದಲ್ಲಿ ಬುದ್ಧಂಕುರ ಪ್ರಕಾಶನದಿಂದ ಆಯೋಜಿಸಿದ್ದ ಸಂತೋಷಕುಮಾರ ಕರಹರಿ ಅವರ ಹೈಕುಗಳ ಸಂಕಲನ 'ನಿಜದರಿವು' ಕೃತಿಯನ್ನು ಹಿರಿಯ ಸಾಹಿತಿ ಕುಂ. ವೀರಭದ್ರಪ್ಪ ಅವರು ಬಿಡುಗಡೆ ಮಾಡಿ ಮಾತನಾಡಿದರು.

ದುರಿತ ಕಾಲಘಟ್ಟ

ರಾಜಕಾರಣಿಗಳ ವೈಯಕ್ತಿಕ ಬದುಕಿನಲ್ಲಿ ಕ್ಯಾಮೆರಾಗಳ ಮೂಲಕ ಇಣುಕುವ, ಚಾರಿತ್ರ್ಯಹರಣ ಮಾಡುವ ಹಾಗೂ ರಾಜ್ಯದ ಗೃಹ ಸಚಿವರಾದವರಿಗೆ ನಿಮ್ಮಪ್ಪಂದೇನು ಎಂಬ ಅಸಾಂವಿಧಾನಿಕ ಪದ ಬಳಸುವ ದುರಿತ ಕಾಲಘಟ್ಟವಿದು. ಬುದ್ಧನ ನಾಡಿನಲ್ಲಿ ಹುಟ್ಟಿಯೂ ಕೆಲವರಿಗೆ ಏನು ಮಾತನಾಡಬೇಕೆಂಬ ಪ್ರಜ್ಞೆ ಇಲ್ಲ ಎಂದು ಸಾಹಿತಿ ಕುಂ.ವೀರಭದ್ರಪ್ಪ ಬೇಸರಿಸಿದರು.

ಮಾನ್ಯಖೇಡದ ಸಾಮ್ರಾಟ ನೃಪತುಂಗ ಅನ್ನದಾತರಿಗಾಗಿ ಮಳೆ ಬರಿಸಿದರೆ ಬೆರಳು ನೀಡುವುದಾಗಿ ಕೊಲ್ಹಾಪುರದ ಮಹಾಲಕ್ಷ್ಮಿಗೆ ಬೇಡಿಕೊಂಡಿದ್ದ. ಅಚಾನಕ್ಕಾಗಿ ಮಳೆ ಸುರಿದಾಗ ಬೆರಳು ಅರ್ಪಿಸಿದ್ದ. ಈ ಸಲ ಮಳೆ ಬಂದಿಲ್ಲ; ಬರ ಆವರಿಸಿದೆ. ಒಬ್ಬ ರಾಜಕಾರಣಿ ಉಪವಾಸವಾದರೂ ಇದ್ದಾರಾ? ಎಂದೂ ಕೇಳಿದರು.

ರಾಜ್ಯದಲ್ಲಿ ಕಬ್ಬು ಬೆಳೆಗಾರರು ಹೋರಾಟಕ್ಕೆ ಇಳಿದಿದ್ದಾರೆ. ಸಕ್ಕರೆಯ ಫಲ ಉಣ್ಣುವ ಉದ್ಯಮಿಗಳಿಂದ ಕಬ್ಬು ಬೆಳೆಗಾರರಿಗೆ ಉತ್ತಮ ದರ ಕೊಡಿಸಲು ರಾಜಕಾರಣಿಗಳು ಧ್ವನಿ ಎತ್ತಿದ್ದಾರಾ? ರೈತರಿಗೆ ರಸಗೊಬ್ಬರ, ವಿದ್ಯುತ್ ಉಚಿತ ಕೊಟ್ಟರೆ ನಿಮ್ಮ ಪುಕ್ಕಟ್ಟೆ ಗ್ಯಾರಂಟಿಗಳನ್ನು ಯಾರೂ ಕೇಳಲ್ಲ. ಬಿಡದಿಯಲ್ಲಿ ಉಳ್ಳವರಿಗಾಗಿ ಶಿವಾಲಯ ಕಟ್ಟುತ್ತಿದ್ದಿರಲ್ಲ, ಅದು ಯಾರಿಗಾಗಿ? ಅದಕ್ಕೆ ರೈತರ ಭೂಮಿ ಕಸಿಯಬೇಕಾ? ರೈತರು ಸುಖವಾಗಿ ಇಲ್ಲದಿದ್ದರೆ ಪ್ರಜಾಪ್ರಭುತ್ವ ಆರೋಗ್ಯವಾಗಿ ಇರಲ್ಲ ಎಂದರು.

ಕುಂ.ವೀರಭದ್ರಪ್ಪ, ಹಿರಿಯ ಸಾಹಿತಿವಿಶ್ವದ ಸಕಲ ಸಮಸ್ಯೆಗಳಿಗೆ ಬುದ್ಧ, ಡಾ.ಬಿ.ಆರ್. ಅಂಬೇಡ್ಕರ್ ಚಿಂತನೆಗಳೇ ಪರಿಹಾರ. ಅಂಥವರ ವಿಚಾರಗಳನ್ನು ದೂರ ಇಡುವವರ ಹುನ್ನಾರ ಅರಿಯಬೇಕಿದೆ ಎಂದರು.

ಸಂವಿಧಾನ ಬದಲಿಸುವ ಕೆಲಸ ಯಾವುದೇ ದುಷ್ಟಶಕ್ತಿಗಳು ಮಾಡಬಾರದು. ಅಂಬೇಡ್ಕರ್ ಸಂವಿಧಾನ ಇರುವ ತನಕ ದೇಶವು ಆರೋಗ್ಯವಾಗಿರುತ್ತದೆ ಎಂದರು.

ಸಮಾಜದಲ್ಲಿ ನಡೆಯುತ್ತಿರುವ ಅಸಂಗತಗಳನ್ನು ಕಥೆ, ಕವನ, ಕಾದಂಬರಿಗಳ ಮೂಲಕ ಗಟ್ಟಿಯಾಗಿ ಪ್ರಶ್ನಿಸುವುದು ಸಾಹಿತ್ಯ ಲೋಕದ ಮುಖ್ಯ ಜವಾಬ್ದಾರಿ ಎಂದು ಪ್ರತಿಪಾದಿಸಿದರು.

ಕೃತಿ ಪರಿಚಯಿಸಿದ ವಿಮರ್ಶಕ ಡಾ.ಗವಿಸಿದ್ದಪ್ಪ ಪಾಟೀಲ, ನಿಜದರಿವು ಕೃತಿಯು 260 ಹೈಕುಗಳ ಗುಚ್ಛ. ಹೈಕು 5–7–5 ಅಕ್ಷರಗಳ ಜೋಡಣೆಯೊಂದಿಗೆ ರಚಿಸುವ ಜಪಾನದ ಮೂಲದ ಕಾವ್ಯ. ಆದರೆ, ತ್ರಿಪದಿಗಿಂತಲೂ ಬಹು ಭಿನ್ನ. ಅರಿವಿನ ಕ್ಷಿತಿಜ ವಿಸ್ತರಿಸುವ ಹೈಕುಗಳು ಕಾವ್ಯಲೋಕದ ಭಾವ ತರಂಗಗಳು ಎಂದು ಬಣ್ಣಿಸಿದರು.

ಕೃತಿಕಾರ ಸಂತೋಷಕುಮಾರ ಕರಹರಿ, ಸಾಹಿತಿಗಳಾದ ಶಿವಶರಣಪ್ಪ ಮೋತಕಪಳ್ಳಿ, ಸುರೇಶ ದೇಶಪಾಂಡೆ ವೇದಿಕೆಯಲ್ಲಿದ್ದರು. ಸಾಹಿತಿ ಶಂಭುಲಿಂಗ ವಾಲ್ದೊಡ್ಡಿ ಅಧ್ಯಕ್ಷತೆ ವಹಿಸಿದ್ದರು.

ವಿಶ್ರಾಂತ ಕುಲಪತಿ ಟಿ.ಎಂ.ಭಾಸ್ಕರ್ ಅವರು ಸಾಹಿತಿಗಳಾದ ವಿ.ಆರ್.ಚಾಂಬಾಳ ಹಾಗೂ ಜಯದೇವಿ ಗಾಯಕವಾಡ ಅವರಿಗೆ 'ಬುದ್ಧಾಂಕುರ ಕನ್ನಡ ಸಾಹಿತ್ಯ ಪ್ರಶಸ್ತಿ' ಹಾಗೂ ಸಿದ್ಧಾರ್ಥ ಚಿಮ್ಮಾಇದಲಾಯಿ ಮತ್ತು ಪೃಥ್ವಿ ಕಪನೂರಕರ ಅವರಿಗೆ 'ಸನ್ನತಿ ಪ್ರೇರಣಾ ಪ್ರಶಸ್ತಿ' ಪ್ರದಾನ ಮಾಡಿದರು.

ರಾಜಕುಮಾರ ಮಾಳಗೆ ಸ್ವಾಗತಿಸಿದರು. ಬೀದರ್ ಜಿಲ್ಲೆಯ ಫತ್ತೇಪುರದ ಮುನ್ನೆಮ್ಮ ಮೇತ್ರೆ ನಿರೂಪಿಸಿದರು.

ದಾಸನಮನ ಸಮೂಹದ ವತಿಯಿಂದ 5ನೇ ದಶ ದಾಸಯಾತ್ರೆ

ಮೈಸೂರು ದಸರಾ ಮಹೋತ್ಸವದಲ್ಲಿ ಭಕ್ತಿಭಾವದಿಂದ ಸಂಪನ್ನ...

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಶುಭಸಂದರ್ಭದಲ್ಲಿ ಚಾಮುಂಡೇಶ್ವರಿ ತಾಯಿಯ ಸನ್ನಿಧಿಯಲ್ಲಿ ಆಯೋಜಿಸಲಾಗಿದ್ದ ದಸರಾ ನವರಾತ್ರಿ ಉತ್ಸವದಲ್ಲಿ ದಾಸನಮನ ಸಮೂಹದ 5ನೇ ದಶ ದಾಸಯಾತ್ರೆ ಕಾರ್ಯಕ್ರಮ ಅತ್ಯಂತ ಭಕ್ತಿಭಾವ ಮತ್ತು ಧಾರ್ಮಿಕ ಸಂಭ್ರಮದೊಂದಿಗೆ ನೆರವೇರಿತು.

ದಾಸ ಸಾಹಿತ್ಯ, ಭಕ್ತಿ ಪರಂಪರೆ ಹಾಗೂ ಹರಿದಾಸರ ಕೀರ್ತನೆಗಳ ಮಹತ್ವವನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮವು ಭಕ್ತರಲ್ಲಿ ಆಧ್ಯಾತ್ಮಿಕ ಉತ್ಸಾಹ ಮೂಡಿಸಿತು ಎಂದು ದಾಸರ ಮನೆ ಸಮೂಹದ ಸ್ಥಾಪಕಿ ಸುಭಾಷಿಣಿ ಪ್ರಕಾಶ್ ತಿಳಿಸಿದ್ದಾರೆ.

ಉತ್ತಮ ರೀತಿಯಲ್ಲಿ ಕಾರ್ಯಕ್ರಮ ನಿಯೋಜಿಸಿ, ಸದಸ್ಯರಿಂದ ಹಾಡಿಸಿದ ರಶ್ಮಿ ರಾವ್ ನವರಾತ್ರಿಯ ಅತ್ಯಂತ ಶ್ರೇಷ್ಠ ದುರ್ಗಾಷ್ಟಮಿಯ ದಿನ ಇಂತಹ ಸೇವೆ ತಾಯಿಯ ಸನ್ನಿಧಿಯಲ್ಲಿ ಒದಗಿ ಬಂದಿದ್ದಕ್ಕೆ ತಂಡದ ಪರವಾಗಿ ಧನ್ಯತಾಭಾವ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ದಾಸನಮನ ತಂಡದ ನಿರ್ವಾಹಕಿ ಗೀತಾಮಣಿ, ಶೃತಿ ಕುಲಕರ್ಣಿ, ಪದ್ಮ ಎಸ್ ಆಚಾರ್ಯ, ಗೌರಿ ಕುಲಕರ್ಣಿ, ಪದ್ಮಜಾ

ಪುರಾಣಿಕ್, ಶಿಲ್ಪ ಸುಬ್ರಹ್ಮಣ್ಯ, ಲತಾ ಎಸ್. ರಾವ್, ಶೈಲಜಾ ರಾವ್, ಲತಾ ಕುಲಕರ್ಣಿ ಮುಂತಾದವರು ಇದ್ದರು.

ಭವ್ಯ ಪರಂಪರೆ - ವಿಜಯನಗರ ವೈಭವದಿಂದ ಮೈಸೂರು ದಸರೆಯವರೆಗೆ

40 ಕಲಾವಿದರ ಮನೋಜ್ಞ ರಂಗಪ್ರಯೋಗದಲ್ಲಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಅನಾವರಣ..

ಮೈಸೂರು :ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ರಾಜವೈಭವ ಹಾಗೂ ಕಲಾಸಿರಿಯನ್ನು ಅನಾವರಣಗೊಳಿಸುವ ಉದ್ದೇಶದಿಂದ ಬೆಂಗಳೂರಿನ ವಿವೇಕಾನಂದ ಕಲಾಕೇಂದ್ರದ ವತಿಯಿಂದ, ಡಾ. ವಿ. ನಾಗರಾಜ್ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ ರೂಪುಗೊಂಡ ?ಭವ್ಯ ಪರಂಪರೆ? ರಂಗರೂಪಕ ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಪ್ರದರ್ಶನಗೊಂಡಿತು. ನಾಡಹಬ್ಬ ದಸರೆಯ ಸಾಂಸ್ಕೃತಿಕ ಉಪಸಮಿತಿಯ ಆಶ್ರಯದಲ್ಲಿ ಆಯೋಜಿಸಲಾದ ಈ ರಂಗಪ್ರಯೋಗವು ವಿಜಯನಗರ ಸಾಮ್ರಾಜ್ಯದ ದಸರಾ ವೈಭವದಿಂದ ಮೈಸೂರು ಒಡೆಯರ ಕಾಲದ ದಸರೆಯವರೆಗಿನ ಐತಿಹಾಸಿಕ ಪಯಣವನ್ನು ಕಲಾತ್ಮಕವಾಗಿ ಕಟ್ಟಿಕೊಟ್ಟಿತು.

ಮಹಾನ್ ಸಾಮ್ರಾಟ ಶ್ರೀಕೃಷ್ಣದೇವರಾಯರ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ವಿಜೃಂಭಿಸುತ್ತಿದ್ದ ದಸರಾ ಮಹೋತ್ಸವದ ಭವ್ಯತೆ, ರಾಜಪರಂಪರೆ ಹಾಗೂ ಸಾಂಸ್ಕೃತಿಕ ಮಹತ್ವವನ್ನು ರಂಗರೂಪಕವು ಪರಿಣಾಮಕಾರಿಯಾಗಿ ಬಿಂಬಿಸಿತು. ವಿಜಯನಗರ ಸಾಮ್ರಾಜ್ಯದ ಪತನದ ನಂತರವೂ ಅದರ ಅನೇಕ ಸಾಂಸ್ಕೃತಿಕ ಪರಂಪರೆಗಳು ಮೈಸೂರು ಒಡೆಯರ ಆಳ್ವಿಕೆಯಲ್ಲಿ ಮುಂದುವರಿದು ಹೊಸ ವೈಭವವನ್ನು ಪಡೆದುಕೊಂಡ ಬಗೆಯನ್ನು ದೃಶ್ಯಗಳ ಮೂಲಕ ಅನಾವರಣಗೊಳಿಸಲಾಯಿತು.

ವಿಜಯನಗರದ ಅರಸರ ಕಾಲದ ದಸರೆಯ ವೈಭವ, ರಾಜಸತ್ತೆಯ ಪ್ರತಿಷ್ಠೆ, ಕಲೆಗಳಿಗೆ ದೊರೆತ ಪ್ರೋತ್ಸಾಹ ಹಾಗೂ ಮೈಸೂರು ಸಂಸ್ಥಾನದ ಅರಸರ ಕಾಲದಲ್ಲಿ ದಸರಾ ಉತ್ಸವವು ಕರ್ನಾಟಕದ ಹೆಮ್ಮೆಯ ಸಾಂಸ್ಕೃತಿಕ ಗುರುತಾಗಿ ರೂಪುಗೊಂಡ ಇತಿಹಾಸವನ್ನು ಕಲಾವಿದರು ರಂಗದ ಮೇಲೆ ಜೀವಂತಗೊಳಿಸಿದರು. ಇಂದಿಗೂ ದಸರಾ ತನ್ನ ರಾಜವೈಭವ, ಸಾಂಪ್ರದಾಯಿಕ ಆಚರಣೆಗಳು ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯಿಂದ ವಿಶ್ವದ ಗಮನ ಸೆಳೆಯುತ್ತಿರುವುದು ಈ ಪರಂಪರೆಯ ನಿರಂತರತೆಗೆ ಸಾಕ್ಷಿಯಾಗಿದೆ.

40 ಕಲಾವಿದರ ಸಮನ್ವಯದಲ್ಲಿ ಮೂಡಿಬಂದ ಈ ರಂಗಪ್ರಯೋಗಕ್ಕೆ ಡಾ. ಶ್ವೇತಾ ಅವರ ನೃತ್ಯ ಸಂಯೋಜನೆ ವಿಶೇಷ ಮೆರುಗು ನೀಡಿತು. ಸಂಗೀತ, ನೃತ್ಯ, ಅಭಿನಯ, ಆಕರ್ಷಕ ವೇಷಭೂಷಣ ಹಾಗೂ ಪರಿಣಾಮಕಾರಿ ರಂಗಸಜ್ಜಿಕೆಯ ಸಮ್ಮಿಲನವು ಪ್ರೇಕ್ಷಕರ ಮನಸೂರೆಗೊಂಡಿತು. ಶ್ರೀಕೃಷ್ಣದೇವರಾಯರ ಪಾತ್ರದಲ್ಲಿ ದೈವಿಕ್ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಪಾತ್ರದಲ್ಲಿ ಧೀರಜ್ ಗಮನ ಸೆಳೆದರು. ಇತರ ಕಲಾವಿದರ ಮನೋಜ್ಞ ಅಭಿನಯ, ಭಾವಪೂರ್ಣ ಅಭಿವ್ಯಕ್ತಿ ಮತ್ತು ಲಯಬದ್ಧ ನೃತ್ಯಗಳು ರಾಜಕಾಲದ ವೈಭವವನ್ನು ಕಣ್ಣಮುಂದೆ ತಂದವು. ಸಂದರ್ಭೋಚಿತ ಸಂಗೀತವು ಪ್ರತಿ ದೃಶ್ಯದ ಭಾವತೀವ್ರತೆಯನ್ನು ಹೆಚ್ಚಿಸಿ, ಪ್ರೇಕ್ಷಕರನ್ನು ಇತಿಹಾಸದ ಪುಟಗಳೊಳಗೆ ಕರೆದೊಯ್ದ ಅನುಭವ ನೀಡಿತು.

ಮೈಸೂರು ಅರಸರು ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿ ಕೈಗೊಂಡ ಮಹತ್ವದ ಕಾರ್ಯಗಳು, ಆಡಳಿತದ ದೂರದೃಷ್ಟಿ ಹಾಗೂ ಪ್ರಗತಿಪರ ಚಿಂತನೆಗಳನ್ನೂ ಈ ರಂಗರೂಪಕ ಪರಿಚಯಿಸಿತು. ಮನರಂಜನೆಯ ಜೊತೆಗೆ ಇತಿಹಾಸದ ಅರಿವು ಮತ್ತು ಪರಂಪರೆಯ ಬಗ್ಗೆ ಅಭಿಮಾನ ಮೂಡಿಸಿದ ?ಭವ್ಯ ಪರಂಪರೆ? ಕರ್ನಾಟಕದ ಸಾಂಸ್ಕೃತಿಕ ಹೆಮ್ಮೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಅರ್ಥಪೂರ್ಣ ಪ್ರಯತ್ನವಾಗಿ ಮೂಡಿಬಂದಿತು.

ಉತ್ತಮ ಆರೋಗ್ಯಕ್ಕೆ ಹಾಲಿನ ಉತ್ಪನ್ನಗಳ ಸೇವನೆ ಅಗತ್ಯ: ಡಾ.ರಮೇಶ್ ಬಿ.ಕೆ.

ರಾಯಚೂರು, ಅ. 19: ದೈನಂದಿನ ಆಹಾರ ಪದ್ಧತಿಯಲ್ಲಿ ಹೈನುಗಾರಿಕೆಯ ಉತ್ಪನ್ನಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಹಾಲು, ಮೊಸರು ಸೇರಿದಂತೆ ಇತರೆ ಹಾಲಿನ ಉತ್ಪನ್ನಗಳನ್ನು ಸಮತೋಲನ ಪ್ರಮಾಣದಲ್ಲಿ ಸೇವಿಸಬೇಕು ಎಂದು ಪಶು ವಿಜ್ಞಾನ ಪ್ರಾಧ್ಯಾಪಕ ಡಾ.ರಮೇಶ್ ಬಿ.ಕೆ.ಅವರು ಹೇಳಿದರು.

ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಅಧೀನದ ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ಹಗರಿ ಹಾಗೂ ಸಿ.ಐ.ಐ. ಫೌಂಡೇಷನ್ ಇವರ ಸಂಯುಕ್ತಾಶ್ರಯದಲ್ಲಿ ಹಗರಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ 'ವಿಶ್ವ ಆಹಾರ ದಿನಾಚರಣೆ–2026' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ವಹಿಸಿದ್ದ ಕೃಷಿ ಮಹಾವಿದ್ಯಾಲಯದ ಪ್ರಭಾರ ಅಧಿಕಾರಿ ಡಾ. ರವಿಶಂಕರ್ ಜಿ. ಅವರು ಮಾತನಾಡಿ, ಈ ವರ್ಷದ ವಿಶ್ವ ಆಹಾರ ದಿನವನ್ನು "ಇಂದಿನ ನಾವೀನ್ಯತೆ ನಾಳಿನ ಪೋಷಣೆ" ಎಂಬ ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ರಾಯಚೂರು ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಅಧೀನದ ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ), ಹಗರಿ ಹಾಗೂ ಸಿ.ಐ.ಐ. ಫೌಂಡೇಷನ್ ಇವರ ಸಂಯುಕ್ತಾಶ್ರಯದಲ್ಲಿ ಹಗರಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ 'ವಿಶ್ವ ಆಹಾರ ದಿನಾಚರಣೆ–2026' ಕಾರ್ಯಕ್ರಮದಲ್ಲಿ ಗ್ರಾಮೀಣ ಮಹಿಳೆಯರು ಪಾಲ್ಗೊಂಡಿದ್ದರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಕೃಷಿ ಮಹಾವಿದ್ಯಾಲಯದ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗದ ಸಹ ಪ್ರಾಧ್ಯಾಪಕಿ ಡಾ. ಶಿಲ್ಪಾ ಹೆಚ್. ಅವರು, ರೈತ ಮಹಿಳೆಯರಿಗೆ ಸಮತೋಲನ ಆಹಾರದ ಅರಿವು, ಮಹಿಳೆಯರು ತಮ್ಮ ಆರೋಗ್ಯದ ಕಡೆಗೆ ವಹಿಸಬೇಕಾದ ಮುನ್ನೆಚ್ಚರಿಕೆ ಹಾಗೂ ಕೃಷಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಕುರಿತು ಮಾಹಿತಿ ಹಂಚಿಕೊ0ಡರು.

ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಡಾ. ಗಿರೀಶ್ ಅವರು ನಿತ್ಯ ಜೀವನದಲ್ಲಿ ಸಿರಿಧಾನ್ಯಗಳ ಮಹತ್ವವನ್ನು ವಿವರಿಸಿದರೆ, ಬೇಸಾಯ ಶಾಸ್ತ್ರದ ಪ್ರಾಧ್ಯಾಪಕ ಡಾ. ಮಂಜುನಾಥ್ ಎನ್. ಅವರು ರೈತರು ತಮ್ಮ ಜಮೀನಿನಲ್ಲಿ ಮನೆ ಬಳಕೆಗೆ ಅಗತ್ಯವಾದ ಏಕದಳ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆದು ಬಳಸುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ ಎಂದು ತಿಳಿಸಿದರು.

ಸಿ.ಐ.ಐ. ಫೌಂಡೇಷನ್ ಕಾರ್ಯಕ್ರಮ ವ್ಯವಸ್ಥಾಪಕ ವಿಕ್ರಮ್ ಎಂ. ನಿಂಬಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಬಹುಮುಖ್ಯ. ಮೌಲ್ಯವರ್ಧನೆಯಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಮಹಿಳೆಯರು ಸಬಲೀಕರಣಗೊಳ್ಳಬೇಕು ಹಾಗೂ ಪೌಷ್ಟಿಕ ಆಹಾರದ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಕೆವಿಕೆ ವಿಜ್ಞಾನಿಗಳು ಪೌಷ್ಟಿಕ ಆಹಾರ ಸೇವನೆ ಮತ್ತು ಆಹಾರ ವ್ಯರ್ಥವಾಗುವುದನ್ನು ತಡೆಗಟ್ಟುವ ಕುರಿತು ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ವಿಜ್ಞಾನಿ ಹಾಗೂ ಕೆವಿಕೆ ಮುಖ್ಯಸ್ಥ ಡಾ. ರವಿ ಎಸ್. ಅತಿಥಿಗಳನ್ನು ಸ್ವಾಗತಿಸಿದರು. ಕೃಷಿ ವಿಸ್ತರಣೆ ವಿಜ್ಞಾನಿ ಡಾ. ನವೀನ್ ಕುಮಾರ್ ಪಿ. ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು. ಕೃಷಿ ಸಂಶೋಧನಾ ಕೇಂದ್ರದ ಹಿರಿಯ ಕ್ಷೇತ್ರ ಅಧೀಕ್ಷಕ ಡಾ. ರವಿಕುಮಾರ್ ಎ. ಸೇರಿದಂತೆ ಬಳ್ಳಾರಿ ತಾಲೂಕಿನ ವಿವಿಧ ಹಳ್ಳಿಗಳಿಂದ ಸುಮಾರು 58ಕ್ಕೂ ಹೆಚ್ಚು ರೈತ ಮಹಿಳೆಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ರಾಜ್ಯ ರಾಜಕಾರಣದಲ್ಲಿ ಹೊಸ ಸಂಚಲನ: ಯತ್ನಾಳ್–ವಿಜಯೇಂದ್ರ ದಿಢೀರ್ ಭೇಟಿ

ಹುಬ್ಬಳ್ಳಿ, ಅ. 19: ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಮತ್ತು ಬಿಜೆಪಿ ರಾ

ಫ್ರಾನ್ಸ್‌ನಲ್ಲಿ ನಡೆದ ಅಶಾಂತಿಯ ಸಂದರ್ಭದಲ್ಲಿ ಕನಿಷ್ಠ 1,200 ಜನರ ಬಂಧನ, 150 ಪೊಲೀಸ್‌ರಿಗೆ ಗಾಯ

ಪ್ಯಾರಿಸ್,ಅ.19: ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಅಶಾಂತಿಯ ಸಮಯದಲ್ಲಿ ಬಂಧಿಸಲ್ಪಟ್ಟವರ ಸಂಖ್ಯೆ 1,200 ತಲುಪಿದೆ ಮತ್ತು ಪ್ರತಿಭಟನಾಕಾರರೊಂದಿಗೆ ನಡೆದ ಘರ್ಷಣೆಯಲ್ಲಿ 150 ಪೊಲೀಸ್ ಮತ್ತು ಜೆಂಡರ್ಮೆರಿ (ಪ್ಯಾರಿಸ್ ಪಡೆ) ಅಧಿಕಾರಿಗಳು ಗಾಯಗೊಂಡಿದ್ದಾರೆ ಎಂದು ಪ್ರಧಾನಿ ಸೆಬಾಸ್ಟಿಯನ್ ಲೆಕೋರ್ನು ತಿಳಿಸಿದ್ದಾರೆ.

"ಸಂಖ್ಯೆಗಳು ನವೀಕರಿಸಲ್ಪಡುತ್ತಿವೆ, ಮತ್ತು ನಾನು ನಿಮ್ಮೊಂದಿಗೆ ಮಾತನಾಡುವಾಗ, ಒಟ್ಟು ಬಂಧಿತರ ಸಂಖ್ಯೆ 1,200 ತಲುಪಿದೆ" ಎಂದು ಲೆಕೋರ್ನು ಸುದ್ದಿಗಾರರಿಗೆ ತಿಳಿಸಿದರು. ಅಶಾಂತಿಯ ಸಮಯದಲ್ಲಿ 150 ಕಾನೂನು ಜಾರಿ ಅಧಿಕಾರಿಗಳು ಗಾಯಗೊಂಡಿದ್ದಾರೆ ಎಂದು ಅಧಿಕಾರಿ ಹೇಳಿದರು. ಶನಿವಾರದಂದು, ಹೆಚ್ಚುತ್ತಿರುವ ಜೀವನ ವೆಚ್ಚ ಮತ್ತು ಬೆಲೆ ಏರಿಕೆಯ ವಿರುದ್ಧ ಫ್ರಾನ್ಸ್‌ನಾದ್ಯಂತ ದೊಡ್ಡ ಪ್ರಮಾಣದ ಪ್ರತಿಭಟನೆಗಳು ನಡೆದವು.

ಪ್ರತಿಭಟನೆಗಳು, ಪ್ರತಿಭಟನಾಕಾರರು ಮತ್ತು ಕಾನೂನು ಜಾರಿ ಅಧಿಕಾರಿಗಳ ನಡುವಿನ ಹಿಂಸಾತ್ಮಕ ಘರ್ಷಣೆಗಳು, ಹಾಗೆಯೇ ಗಲಭೆ, ಲೂಟಿ ಮತ್ತು ವಿಧ್ವಂಸಕ ಕೃತ್ಯಗಳಿಂದ ಕೂಡಿದ್ದವು. ಪೊಲೀಸರು ಗುಂಪಿನ ವಿರುದ್ಧ ಅಶ್ರುವಾಯು, ಸ್ಟನ್ ಗ್ರೆನೇಡ್‌ಗಳು ಮತ್ತು ವಾಟರ್ ಕೆನಾನ್‌ಗಳನ್ನು ಬಳಸಿದರು. ಅಶಾಂತಿಯ ಸಮಯದಲ್ಲಿ, ಉಗ್ರಗಾಮಿ ಅಂಶಗಳು ಲಿಮೊಗೆಸ್, ಮಾರ್ಸೇಲ್ಸ್ ಮತ್ತು ಲಿಲ್ಲಿಯ ಪಟ್ಟಣ ಸಭಾಂಗಣಗಳಿಗೆ (ಟೌನ್ ಹಾಲ್) ನುಗ್ಗಿದವು. ಲಿಮೊಗೆಸ್‌ನಲ್ಲಿ, ಟೌನ್ ಹಾಲ್‌ನ ನೆಲ ಮಹಡಿಯಲ್ಲಿ ಬೆಂಕಿ ಹಚ್ಚಲಾಗಿದ್ದು, ಅದು ನಂತರ ಮೇಲ್ಛಾವಣಿಗೆ ಹಬ್ಬಿತು.

ಲೈನ್ಸ್‌ನಲ್ಲಿ, ಪ್ರವಾಸಿ ಕಚೇರಿಯನ್ನು ಲೂಟಿ ಮಾಡಿ ಬೆಂಕಿ ಹಚ್ಚಲಾಯಿತು. ಒಟ್ಟಾರೆಯಾಗಿ, ಪ್ಯಾರಿಸ್ನಲ್ಲಿ 110,000 ಸೇರಿದಂತೆ ಫ್ರಾನ್ಸ್‌ನಾದ್ಯಂತ 550,000 ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜೀವನ ವೆಚ್ಚ ಏರಿಕೆ, ತಿಕ್ಷಣಕ್ಕೆ ಅನುದಾನದ ಕೊರತೆ ಮತ್ತು ಸಾರ್ವಜನಿಕ ಸೇವೆಗಳ ಕುಸಿತದ ವಿರುದ್ಧ ದೇಶಾದ್ಯಂತ ನಡೆದ ಪ್ರತಿಭಟನೆಗಳು ಗಲಭೆ, ಲೂಟಿ ಮತ್ತು ಮಾರಣಾಂತಿಕ ಹಿಂಸಾಚಾರಕ್ಕೆ ತಿರುಗಿದ ಹಿನ್ನೆಲೆಯಲ್ಲಿ, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರೋನ್ ಅವರು "ಶಾಂತಿ ಮತ್ತು ಸುವ್ಯವಸ್ಥೆ"ಯನ್ನು ಕಾಪಾಡಿಕೊಳ್ಳುವಂತೆ ಕರೆ ನೀಡಿದ್ದಾರೆ. ಎಲಿಸೀ ಅರಮನೆಯಿಂದ ದೂರದರ್ಶನದ ಮೂಲಕ ದೇಶವನ್ನುದ್ದೇಶಿಸಿ ಮಾತನಾಡಿದ ಮ್ಯಾಕ್ರೋನ್, "ನಾವೆಲ್ಲರೂ ಕೋಪ ಮತ್ತು ಅವಮಾನವನ್ನು ಅನುಭವಿಸುತ್ತಿದ್ದೇವೆ" ಎಂದು ಹೇಳುತ್ತಲೇ, ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸದಂತೆ ಪ್ರತಿಭಟನಾಕಾರರನ್ನು ಕೋರಿದರು. ಪ್ರತಿಭಟನಾಕಾರರ "ನ್ಯಾಯಯುತ ಬೇಡಿಕೆಗಳು" ಹಾಗೂ ವಿನಾಶ ಮತ್ತು ಲೂಟಿಯಲ್ಲಿ ತೊಡಗಿರುವವರ ನಡುವೆ ವ್ಯತ್ಯಾಸವನ್ನು ಗುರುತಿಸುವುದು ಅಗತ್ಯ ಎಂದು ಅವರು ಒತ್ತಿ ಹೇಳಿದರು.

ಷರತ್ತು ಒಪ್ಪಿದರೆ 7 ದಿನಗಳಲ್ಲಿ ಹಾರ್ಮುಜ್ ಜಲಸಂಧಿ ಮುಕ್ತ: ಅಮೆರಿಕಕ್ಕೆ ಇರಾನ್‌ನಿಂದ ಹೊಸ ಪ್ರಸ್ತಾವನೆ

ಟೆಹ್ರಾನ್, ಅ.19: ಪಶ್ಚಿಮ ಏಷ್ಯಾದಲ್ಲಿ ಭುಗಿಲೆದ್ದಿರುವ ಸಂಘರ್ಷ ಮತ್ತು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಉಂಟಾಗಿರುವ ಆತಂಕದ ನಡುವೆ, ಆಯಕಟ್ಟಿನ ಹಾರ್ಮುಜ್ ಜಲಸಂಧಿಯನ್ನು ಕೇವಲ ಒಂದು ವಾರದೊಳಗೆ ಮರುತೆರೆಯಲು ಇರಾನ್ ಸಿದ್ಧ ಎಂದಿದೆ. ಆದರೆ, ಇದಕ್ಕೆ ಅಮೆರಿಕ ತನ್ನ ಕಠಿಣ ನಿರ್ಬಂಧಗಳನ್ನು ಸಡಿಲಿಸಬೇಕು ಮತ್ತು ತನ್ನ ಷರತ್ತುಗಳನ್ನು ಈಡೇರಿಸಬೇಕು ಎಂಬ ಒಪ್ಪಂದದ ಮಾರ್ಗಸೂಚಿಯನ್ನು ಟೆಹ್ರಾನ್ ಮುಂದಿಟ್ಟಿದೆ. ಕತಾರ್ ದೇಶದ ಮಧ್ಯಸ್ಥಿಕೆಯ ಮೂಲಕ ಈ ಪ್ರಸ್ತಾವನೆಯನ್ನು ವಾಷಿಂಗ್ಟನ್‌ಗೆ ತಲುಪಿಸಲಾಗಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಸ್ಪಷ್ಟಪಡಿಸಿದ್ದಾರೆ.

ಅಮೆರಿಕವು ಇರಾನ್ ವಿಧಿಸಿರುವ ಷರತ್ತುಗಳನ್ನು ಅಧಿಕೃತವಾಗಿ ಒಪ್ಪಿಕೊಂಡರೆ, ಒಪ್ಪಿಗೆಯಾದ 6ನೇ ದಿನದಂದು ಹಾರ್ಮುಜ್ ಜಲಸಂಧಿಯ ಮೂಲಕ ಸಾಮಾನ್ಯ ವಾಣಿಜ್ಯ ನೌಕಾ ಸಂಚಾರವನ್ನು ಪುನರಾರಂಭಿಸಲಾಗುತ್ತದೆ. ಜಲಸಂಧಿ ಮುಕ್ತವಾದ ಮರುದಿನವೇ (7ನೇ ದಿನ) ಅಮೆರಿಕ ಮತ್ತು ಇರಾನ್ ನಡುವೆ ನೇರ ರಾಜತಾಂತ್ರಿಕ ಮಾತುಕತೆಗಳು ಆರಂಭವಾಗಲಿವೆ ಎಂದು ಅರಘ್ಚಿ ವಿವರಿಸಿದ್ದಾರೆ.

ಒತ್ತಡ ಮತ್ತು ಸಂಚಾರ ಜತೆಯಾಗಿ ಸಾಧ್ಯವಿಲ್ಲ:

ಇರಾನ್ ಮೇಲೆ ಮಿಲಿಟರಿ ಒತ್ತಡ ಮತ್ತು ನೌಕಾ ನಿರ್ಬಂಧಗಳನ್ನು ಮುಂದುವರಿಸುತ್ತಲೇ, ಜಲಸಂಧಿಯಲ್ಲಿ ಸರಕು ಸಾಗಣೆ ಸರಾಗವಾಗಿರಬೇಕು ಎಂದು ಅಮೆರಿಕ ನಿರೀಕ್ಷಿಸುವುದು ಅಸಾಧ್ಯ ಎಂದು ಅವರು ಗುಡುಗಿದ್ದಾರೆ. ಇರಾನ್‌ನ ಪ್ರಮುಖ ಬಂದರುಗಳ ಮೇಲೆ ಅಮೆರಿಕ ಮತ್ತು ಮಿತ್ರರಾಷ್ಟ್ರಗಳು ವಿಧಿಸಿರುವ ನೌಕಾ ತಡೆಗೋಡೆಗಳನ್ನು ತಕ್ಷಣವೇ ಹಿಂಪಡೆಯಬೇಕು.

ತೈಲ ಮಾರಾಟದ ಮೇಲಿನ ನಿರ್ಬಂಧ ಸಡಿಲಿಕೆ: ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇರಾನ್ ತನ್ನ ಕಚ್ಚಾ ತೈಲವನ್ನು ಯಾವುದೇ ಅಡೆತಡೆಯಿಲ್ಲದೆ ಮಾರಾಟ ಮಾಡಲು ಅನುಮತಿ ನೀಡಬೇಕು. ಲೆಬನಾನ್ ಮತ್ತು ಗಾಜಾ ವ್ಯಾಪ್ತಿಯಲ್ಲಿ ತಕ್ಷಣವೇ ಸಂಪೂರ್ಣ ಕದನ ವಿರಾಮ ಜಾರಿಗೆ ತರಬೇಕು. ಹಾರ್ಮುಜ್ ಜಲಸಂಧಿಯು ಪರ್ಷಿಯನ್ ಕೊಲ್ಲಿಯನ್ನು ಒಮಾನ್ ಕೊಲ್ಲಿ ಮತ್ತು ಅರಬ್ಬಿ ಸಮುದ್ರದೊಂದಿಗೆ ಸಂಪರ್ಕಿಸುವ ಅತ್ಯಂತ ಕಿರಿದಾದ ಜಲಮಾರ್ಗವಾಗಿದೆ. ವಿಶ್ವದಲ್ಲಿ ಸಮುದ್ರ ಮಾರ್ಗದ ಮೂಲಕ ಸಾಗಣೆಯಾಗುವ ಒಟ್ಟು ಕಚ್ಚಾ ತೈಲದ ಶೇ.20ರಿಂದ 25 ರಷ್ಟು ಭಾಗ ಇದೇ ಜಲಸಂಧಿಯ ಮೂಲಕವೇ ಹಾದುಹೋಗುತ್ತದೆ.

ಜಾಗತಿಕ ಆರ್ಥಿಕತೆಯ ಮೇಲೆ ಪ್ರಭಾವ:

ಈ ಮಾರ್ಗದಲ್ಲಿ ಸಣ್ಣ ವ್ಯತ್ಯಯ ಉಂಟಾದರೂ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಗಗನಕ್ಕೇರುತ್ತದೆ. ಇದು ಭಾರತವೂ ಸೇರಿದಂತೆ ಪ್ರಮುಖ ಆಮದುದಾರ ದೇಶಗಳಲ್ಲಿ ತೈಲ ಬೆಲೆ ಏರಿಕೆ, ಸಾರಿಗೆ ವೆಚ್ಚದ ಹೆಚ್ಚಳ ಮತ್ತು ಹಣದುಬ್ಬರಕ್ಕೆ ನೇರ ಕಾರಣವಾಗುತ್ತದೆ.

ಇರಾನ್ ರಾಜತಾಂತ್ರಿಕ ಬಾಗಿಲನ್ನು ತೆರೆದಿಟ್ಟಿದ್ದು, ಜಲಮಾರ್ಗ ಸುಗಮವಾಗುವುದೋ ಅಥವಾ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳ್ಳುವುದೋ ಎಂಬುದು ವಾಷಿಂಗ್ಟನ್ ಕೈಗೊಳ್ಳುವ ಅಂತಿಮ ನಿರ್ಧಾರದ ಮೇಲೆ ನಿಂತಿದೆ.

ಝಲೆನ್ಸ್ಕಿ ಹೊರಗಿಟ್ಟು ಉಕ್ರೇನ್ ಭವಿಷ್ಯ ನಿರ್ಧಾರ ರಷ್ಯಾ, ಅಮೆರಿಕ, ಚೀನಾ ಮಹಾ ಶೃಂಗಸಭೆಗೆ ಪ್ರಸ್ತಾಪ

ವಾಷಿಂಗ್ಟನ್, ಅ.19: ರಷ್ಯಾ ಮತ್ತು ಉಕ್ರೇನ್ ನಡುವಿನ ನಾಲ್ಕು ವರ್ಷಗಳ ಸಂಘರ್ಷಕ್ಕೆ ಮಾಸ್ಕೋ ಪರವಾದ ಶಾಂತಿ ಒಪ್ಪಂದದ ಮೂಲಕ ಅಂತ್ಯಹಾಡಲು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮಹತ್ವದ ಪ್ರಸ್ತಾವನೆ ಮುಂದಿಟ್ಟಿದ್ದಾರೆ.

ಮುಂದಿನ ತಿಂಗಳು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಜತೆ 3 ದಿನ ತ್ರಿಪಕ್ಷೀಯ ಶೃಂಗಸಭೆ ನಡೆಸುವ ಯೋಜನೆಯನ್ನು ಪುಟಿನ್ ಪ್ರಸ್ತಾಪಿಸಿದ್ದಾರೆ ಎಂದು ಪತ್ರಿಕೆಯೊಂದು ವರದಿ ಮಾಡಿದೆ. ಇತ್ತೀಚೆಗೆ ಟ್ರಂಪ್ ಅವರೊಂದಿಗೆ ನಡೆದ ದೂರವಾಣಿ ಸಂಭಾಷಣೆಯ ವೇಳೆ ಪುಟಿನ್ ಈ ಕಲ್ಪನೆಯನ್ನು ಮುಂದಿಟ್ಟಿದ್ದು, ಇದೇ ವೇಳೆ ರಷ್ಯಾದಿಂದ ಡೀಸೆಲ್ ಖರೀದಿಸುವ ಕುರಿತ ತೈಲ ಒಪ್ಪಂದವೂ ಚರ್ಚೆಗೆ ಬಂದಿದೆ.

ಚೀನಾ ಸಮ್ಮತಿ, ಅಮೆರಿಕದ ಮೀನಮೇಷ

ಡೊನಾಲ್ಡ್ ಟ್ರಂಪ್ ಈ ಸಭೆಯಲ್ಲಿ ಭಾಗವಹಿಸಲು ಒಪ್ಪಿದರೆ ತಾವು ಸಿದ್ಧ ಎಂದು ಚೀನಾ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಅಮೆರಿಕದ ಹಿರಿಯ ಅಧಿಕಾರಿಗಳ ಪ್ರಕಾರ ಟ್ರಂಪ್ ಇನ್ನೂ ಈ ಶೃಂಗಸಭೆಗೆ ಅಧಿಕೃತ ಒಪ್ಪಿಗೆ ನೀಡಿಲ್ಲ. ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಪ್ರತಿಕ್ರಿಯಿಸಿ,ಕಾರ್ಯಸೂಚಿ ಇನ್ನೂ ಅಂತಿಮಗೊಂಡಿಲ್ಲವಾದರೂ, ಮೂರೂ ದೇಶಗಳು ಇಂತಹ ಸಭೆಯ ಸಾಧ್ಯತೆಯನ್ನು ಸೈದ್ಧಾಂತಿಕವಾಗಿ ಒಪ್ಪಿಕೊಂಡಿವೆ ಎಂದಿದ್ದಾರೆ.

ಉಕ್ರೇನ್ ಮತ್ತು ಯುರೋಪ್‌ಗೆ ಆತಂಕ:

ಉಕ್ರೇನ್ ಸಂಪೂರ್ಣವಾಗಿ ಹೊರಗಿಟ್ಟು ರಷ್ಯಾ, ಅಮೆರಿಕ ಮತ್ತು ಚೀನಾ ಸೇರಿ ತಮ್ಮ ದೇಶದ ಭವಿಷ್ಯ ನಿರ್ಧರಿಸಲು ಮುಂದಾಗಿರುವುದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಹಾಗೂ ಯುರೋಪಿಯನ್ ಮಿತ್ರರಾಷ್ಟ್ರಗಳನ್ನು ಕೆರಳಿಸಿದೆ. ತಮ್ಮ ಹಿತಾಸಕ್ತಿಗೆ ವಿರುದ್ಧವಾಗಿ ಮಾಸ್ಕೋಗೆ ಅನುಕೂಲಕರವಾದ ಒಪ್ಪಂದ ಹೇರಲಾಗುತ್ತಿದೆ ಎಂದು ಕೀವ್ ಆತಂಕ ವ್ಯಕ್ತಪಡಿಸಿದೆ.

ಝೆಲೆನ್ಸ್ಕಿ ವಿರುದ್ಧ ಟ್ರಂಪ್ ತೀವ್ರ ವಾಗ್ದಾಳಿ:

ತಮ್ಮ ಟ್ರೂತ್ ಸೋಶಿಯಲ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಟ್ರಂಪ್, ಶಾಂತಿ ಮಾತುಕತೆಗಳು ಉತ್ತಮ ಪ್ರಗತಿ ಕಾಣುತ್ತಿವೆ. ಇದೇ ವೇಳೆ ರಷ್ಯಾದ ಸಂಸ್ಕರಣಾಗಾರಗಳ ಮೇಲೆ ಉಕ್ರೇನ್ ನಡೆಸುತ್ತಿರುವ ದಾಳಿಗಳು ಜಾಗತಿಕ ತೈಲ ಬೆಲೆ ಏರಿಕೆಗೆ ಕಾರಣವಾಗುತ್ತಿವೆ ಎಂದು ಝೆಲೆನ್ಸ್ಕಿ ವಿರುದ್ಧ ಗರಂ ಆಗಿದ್ದಾರೆ. ನಾನು ಶಾಂತಿ ತರಲು ಪ್ರಯತ್ನಿಸುತ್ತಿದ್ದೇನೆ, ಆದರೆ ಯುರೋಪ್ ಮತ್ತು ಹಿಂದಿನ ಜೋಬೈಡನ್ ಆಡಳಿತ ನೀಡಿದ ಅಪಾರ ಹಣದಿಂದಾಗಿ ಝೆಲೆನ್ಸ್ಕಿಗೆ ಯುದ್ಧ ನಿಲ್ಲಿಸಲು ಇಷ್ಟವಿಲ್ಲ. ಅವರ ದೇಶ ಶಿಥಿಲಗೊಂಡಿದೆ, ಭೂಮಿ ಕೈಬಿಟ್ಟು ಹೋಗಿದೆ, ಸೈನಿಕರು ಸಾವನ್ನಪ್ಪುತ್ತಿದ್ದಾರೆ. ನನಗೆ ಈ ವಿನಾಶಕಾರಿ ರಕ್ತಪಾತ ಕೂಡಲೇ ಕೊನೆಗೊಳ್ಳಬೇಕು ಎಂದು ಟ್ರಂಪ್ ಗುಡುಗಿದ್ದಾರೆ.

ಅಮೆರಿಕದಲ್ಲಿ ಹಣದುಬ್ಬರ ಹಾಗೂ ಇಂಧನ ದರ ಇಳಿಕೆ ಮಾಡುವ ಉದ್ದೇಶದಿಂದ ಟ್ರಂಪ್ ಆಡಳಿತವು ರಷ್ಯಾದ ಮೇಲಿನ ಕೆಲವು ಇಂಧನ ನಿರ್ಬಂಧಗಳನ್ನು ಸಡಿಲಿಸಿ ರಷ್ಯಾದಿಂದ ಡೀಸೆಲ್ ಆಮದಿಗೆ ಅನುಮತಿ ನೀಡಿದೆ. ಇದು ವಾಷಿಂಗ್ಟನ್ ಮತ್ತು ಯುರೋಪಿಯನ್ ಒಕ್ಕೂಟದ ನಡುವೆ ಭಿನ್ನಾಭಿಪ್ರಾಯ ಮೂಡಿಸಿದೆ.

ಭೌಗೋಳಿಕ ರಾಜಕೀಯ ಸಮೀಕರಣ

ಚೀನಾವನ್ನು ಮಧ್ಯಸ್ಥಿಕೆದಾರನಾಗಿ ತರುವ ಮೂಲಕ ಅಮೆರಿಕದ ಮೇಲೆ ರಾಜತಾಂತ್ರಿಕ ಒತ್ತಡ ಹೇರುವುದು ಹಾಗೂ ಯುದ್ಧದಲ್ಲಿ ತನ್ನ ಆರ್ಥಿಕ ಮತ್ತು ಗಡಿ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವುದು ಪುಟಿನ್ ಅವರ ಈ ತ್ರಿಪಕ್ಷೀಯ ಸಭೆಯ ಹಿಂದಿನ ಮುಖ್ಯ ರಾಜತಾಂತ್ರಿಕ ತಂತ್ರವಾಗಿದೆ.

ಕೆನ್ಯಾದಲ್ಲಿ ಹೆಚ್ಚುತ್ತಿರುವ ಇಬೋಲಾ ಪ್ರಕರಣಗಳ ನಡುವೆ ಭಾರತದಿಂದ 2ನೇ ಬಾರಿಗೆ ನೆರವು



ನವದೆಹಲಿ,ಅ.19: ಇಬೋಲಾ ವೈರಸ್ ವಿರುದ್ಧದ ಹೋರಾಟವನ್ನು ಬಲಪಡಿಸಲು ಭಾರತವು ಪೂರ್ವ ಆಫ್ರಿಕಾದ ರಾಷ್ಟ್ರವಾದ ಕೆನ್ಯಾಗೆ 11 ಟನ್ ತೂಕದ ವೈದ್ಯಕೀಯ ಸಹಾಯದ ಎರಡನೇ ಕಂತನ್ನು ಕಳುಹಿಸಿದೆ. ಜಾಗತಿಕ ಆರೋಗ್ಯ ಭದ್ರತೆಗೆ ಭಾರತದ ಬದ್ಧತೆಯನ್ನು ಎತ್ತಿ ತೋರಿಸುವ ಈ ನಿರ್ಣಾಯಕ ನೆರವನ್ನು ಭಾರತದ ಹೈಕಮಿಷನರ್ ಆದರ್ಶ್ ಸ್ವೈಕಾ ಅವರು ಸೋಮವಾರ ಕೆನ್ಯಾದ ಸಾರ್ವಜನಿಕ ಆರೋಗ್ಯ ಪ್ರಧಾನ ಕಾರ್ಯದರ್ಶಿ ಮೇರಿ ಮುಥೋನಿ ಮುರಿಯುಕಿ ಅವರಿಗೆ ಹಸ್ತಾಂತರಿಸಿದರು.

11 ಟನ್ ತೂಕದ ಈ ಸಾಗಣೆಯು ಅತ್ಯಾವಶ್ಯಕ ರಕ್ಷಣಾ ಸಾಮಗ್ರಿಗಳು ಮತ್ತು ಪ್ರಯೋಗಾಲಯದ ಉಪಕರಣಗಳಿಂದ ಕೂಡಿದೆ. ಇದು ಪಿಪಿಇ ಕಿಟ್, ಏರ್–ಪ್ಯೂರಿಫೈಯಿಂಗ್ ರೆಸ್ಪಿರೇಟರ್ಗಳು, ಬಯೋಸೆಫ್ಟಿ ಕ್ಯಾಬಿನೆಟ್ ಮತ್ತು ಕೋಲ್ಡ್–ಚೈನ್ ರೆಫ್ರಿಜರೇಟರ್ಗಳನ್ನು ಒಳಗೊಂಡಿದೆ. ಮುಂಚೂಣಿಯಲ್ಲಿರುವ ವೈದ್ಯಕೀಯ ಸಿಬ್ಬಂದಿಯನ್ನು ರಕ್ಷಿಸಲು ಮತ್ತು ಕೆನ್ಯಾದಲ್ಲಿ ರೋಗನಿರ್ಣಯದ ಸಾಮರ್ಥ್ಯಗಳು ಹಾಗೂ ಸಾರ್ವಜನಿಕ ಆರೋಗ್ಯ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಈ ಸಂಪನ್ಮೂಲಗಳು ಅತ್ಯಂತ ನಿರ್ಣಾಯಕವಾಗಿವೆ.

ಕೆನ್ಯಾದಲ್ಲಿ 49 ವರ್ಷದ ಆಸ್ಪತ್ರೆ ಸಿಬ್ಬಂದಿಯೊಬ್ಬರಿಗೆ ಎಂಟನೇ ಇಬೋಲಾ ಸೋಂಕು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಈ ಸಕಾಲಿಕ ಸಹಾಯ ಬಂದಿದೆ. ಕೆನ್ಯಾ ಆರೋಗ್ಯ ಸಚಿವಾಲಯದ ಆರೋಗ್ಯ ಮಹಾನಿರ್ದೇಶಕ ಪ್ಯಾಟ್ರಿಕ್ ಅಮೊತ್ ಅವರ ಪ್ರಕಾರ, ರೋಗಿಯನ್ನು ಪ್ರಸ್ತುತ ಪ್ರತ್ಯೇಕವಾಗಿರಿಸಲಾಗಿದೆ (ಐಸೋಲೇಶನ್) ಮತ್ತು ಇತರ ಅಪಾಯಸ್ಥ ರೋಗಿಗಳು ಚೇತರಿಕೆಯ ಲಕ್ಷಣಗಳನ್ನು ತೋರಿಸುತ್ತಿದ್ದಾರೆ. ಭಾನುವಾರ 38 ಜನರಿಗೆ ಪರೀಕ್ಷೆ ನಡೆಸಲಾಗಿದ್ದು, ಒಬ್ಬರಿಗೆ ಇಬೋಲಾದ ಬುಂಡಿಬುಗ್ಯೋ ತಳಿ ಇರುವುದು ದೃಢಪಟ್ಟಿದೆ ಎಂದು ಕ್ವಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ. ವಿಶ್ವ ಆರೋಗ್ಯ ಸಂಸ್ಥೆಯು ಇಬೋಲಾವನ್ನು ತೀವ್ರವಾದ ಮತ್ತು ಸಾಮಾನ್ಯವಾಗಿ ಮಾರಣಾಂತಿಕ ಕಾಯಿಲೆ ಎಂದು ವ್ಯಾಖ್ಯಾನಿಸುತ್ತದೆ. ಇದು ಕಾಡು ಪ್ರಾಣಿಗಳಿಂದ ಮನುಷ್ಯರಿಗೆ ಮತ್ತು ನಂತರ ಸೋಂಕಿತ ದೈಹಿಕ ದ್ರವಗಳು ಅಥವಾ ಕಲುಷಿತ ಮೇಲ್ಮೈಗಳೊಂದಿಗೆ ನೇರ ಸಂಪರ್ಕದ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತದೆ.ಭಾರತದ ನಿರಂತರ ಬೆಂಬಲವು ಆರೋಗ್ಯ ರಕ್ಷಣೆಯಲ್ಲಿ ದ್ವಿಪಕ್ಷೀಯ ಪಾಲುದಾರಿಕೆಯನ್ನು ಬಲಪಡಿಸುತ್ತದೆ ಮತ್ತು ಮಾರಣಾಂತಿಕ ವೈರಸ್ ಅನ್ನು ನಿಯಂತ್ರಿಸುವ ಕೆನ್ಯಾದ ಪ್ರಯತ್ನಗಳಿಗೆ ಸಹಾಯ ಮಾಡುತ್ತದೆ.

ಅ.24ರವರೆಗೆ ಸೌದಿ ಅರೇಬಿಯಾಕ್ಕೆ ಫ್ಲೈದುಬೈ ವಿಮಾನಗಳು ರದ್ದು

ದುಬೈ: ಸೌದಿ ಅರೇಬಿಯಾದಲ್ಲಿನ ಪ್ರಸ್ತುತ ಯುದ್ಧದ ಪರಿಸ್ಥಿತಿಯ ದೃಷ್ಟಿಯಿಂದ, ಸೌದಿ ಅರೇಬಿಯಾ ಸಾಮ್ರಾಜ್ಯಕ್ಕೆ ನಿಗದಿತ ವಿಮಾನಗಳ ವೇಳಾಪಟ್ಟಿಯಲ್ಲಿ ಕೆಲವು ಬದಲಾವಣೆಗಳಾಗುವ ನಿರೀಕ್ಷೆಯಿದೆ ಎಂದು ಫ್ಲೈದುಬೈ ವಕ್ತಾರರು ತಿಳಿಸಿದ್ದಾರೆ. 'ರಿಯಾದ್, ದಮ್ಮಾಮ್ ಮತ್ತು ಅಭಾ ಸೇರಿದಂತೆ ಸಾಮ್ರಾಜ್ಯದ ಹಲವು ಗಮ್ಯಸ್ಥಾನಗಳಿಗೆ ತೆರಳಬೇಕಿದ್ದ ಫ್ಲೈದುಬೈ ವಿಮಾನಗಳನ್ನು ಅ.24ರವರೆಗೆ ರದ್ದುಗೊಳಿಸಲಾಗಿದೆ. ನಾವು ಪರಿಸ್ಥಿತಿಯನ್ನು ನಿಕಟವಾಗಿ ಗಮನಿಸುತ್ತಿದ್ದೇವೆ ಮತ್ತು ನಮ್ಮ ವಿಮಾನ ವೇಳಾಪಟ್ಟಿಯಲ್ಲಿನ ಯಾವುದೇ ಬದಲಾವಣೆಗಳ ಕುರಿತು ಅಧಿಕೃತ ಮಾಧ್ಯಮಗಳ ಮೂಲಕ ನಮ್ಮ ಗ್ರಾಹಕರಿಗೆ ಇತ್ತೀಚಿನ ಮಾಹಿತಿಯನ್ನು ಒದಗಿಸುತ್ತೇವೆ' ಎಂದು ಅವರು ಹೇಳಿದರು.

'ಗ್ರಾಹಕರು ತಮ್ಮ ವಿಮಾನಗಳ ಸ್ಥಿತಿಯನ್ನು ನಿಯಮಿತವಾಗಿ ಪರಿಶೀಲಿಸಬೇಕು ಮತ್ತು ತಮ್ಮ ಪ್ರಯಾಣಕ್ಕೆ ಸಂಬಂಧಿಸಿದ ಯಾವುದೇ ಬೆಳವಣಿಗೆಗಳ ಬಗ್ಗೆ ಮಾಹಿತಿ ಪಡೆಯಲು ತಮ್ಮ ಸಂಪರ್ಕ ವಿವರಗಳು ನವೀಕೃತವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ನಾವು ಸಲಹೆ ಮಾಡುತ್ತೇವೆ' ಎಂದು ಅವರು ತಿಳಿಸಿದರು.

ಏಷ್ಯನ್ ಪ್ಯಾರಾ ಗೇಮ್ಸ್: ಭಾರತಕ್ಕೆ 11 ಪದಕ ನಾಲ್ಕು ಚಿನ್ನ, ಐದು ಬೆಳ್ಳಿ, ಎರಡು ಕಂಚು

ಜಾವೆಲಿನ್ ಥ್ರೋ: ರಿಂಕು | ಉದ್ದ ಜಿಗಿತ: ನಿಷಾದ್ ಕುಮಾರ್ | ಶೂಟಿಂಗ್: ಮೋನಾ ಅಗರ್ವಾಲ್

ನವದೆಹಲಿ,ಅ.19: ಜಪಾನ್‌ನ ಐಚಿ–ನಗೋಯಾದಲ್ಲಿ ಸೋಮವಾರ ಆರಂ